CC-O. In Public Domain. Digitized by eGangotri

ಶ್ರೀ ಶಂಕರಾಚಾರ್ಯ ವಿರಚಿತ

ಸೌಂದರ್ಯ ಲಹರೀ

ಭಜ ಗೋವಿದಂ

ಮತ್ತು

ದ್ವಾದಶ ಪಂಜರಿಕಾ

(ಕನ್ನಡ ಪದ್ಯಾನುವಾದ)



ಅನುವಾದಕರು

ಲಕ್ಷ್ಮಣ ವಿರೂಪಾಕ್ಷ ಜೋಶಿ

ಶೃಂಗೇರಿ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶಂಕರಾಚಾರ್ಯ ವಿರಚಿತ

ಸೌಂದರ್ಯ ಲಹರೀ
ಭಜ ಗೋವಿಂದಂ
ಮತ್ತು
ದ್ವಾದಶ ಪಂಜರಿಕಾ

(ಕನ್ನಡ ಪದ್ಯಾನುವಾದ)

ಅನುವಾದಕರು :

ಲಕ್ಷ್ಮಣ ವಿರೂಪಾಕ್ಷ ಜೋಶಿ

ಪ್ರಕಾಶಕರು :

ಲಕ್ಷ್ಮಣ ವಿರೂಪಾಕ್ಷ ಜೋಶಿ,
ವಠಾಳವಾಡ್ಡಿ, ಎಮ್ಮೀಕೆರಿ ಸಾಲೆಯ ಹತ್ತಿರ,
ಧಾರವಾಡ- ೭

ಗ್ರಂಥಾಲಯ
Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶಂಕರಾಚಾರ್ಯ ವಿರಚಿತ 'ಸೌಂದರ್ಯ ಲಹರೀ'
ಭಜ ಗೋವಿಂದಂ ಮತ್ತು ದ್ವಾದಶ ಪಂಜರಿಕಾ–
ಅನುವಾದಕರು : ಶ್ರೀ ಲಕ್ಷ್ಮಣ ವಿರೂಪಾಕ್ಷ ಜೋಶಿ.
ಪುಟಗಳು : xiv + ೩೬
ಮೊದಲ ಮುದ್ರಣ– ೧೯೮೫, ೧೦೦೦ ಪ್ರತಿಗಳು

(ಎಲ್ಲ ಹಕ್ಕುಗಳು ಅನುವಾದಕರಿಗೆ ಸೇರಿವೆ)

ಬೆಲೆ : ರೂ. ೩–೦೦

ಮುದ್ರಕರು :
ಮನೋಹರ ಪ್ರಿಂಟಿಂಗ್ ಪ್ರೆಸ್,
ಧಾರವಾಡ Sri Vidyabharathi Book Centre, Sringeri

CC-O. In Public Domain. Digitized by eGangotri

ಮುನ್ನುಡಿ

ಶ್ರೀ ಭಗವಾನ್ ಶಂಕರಾಚಾರ್ಯರು ಆವಾಙ್ಮನಸ ಅವ್ಯಕ್ತ ಆದಿ ಶಕ್ತಿಯಾದ ಶ್ರೀ ತ್ರಿಪುರಸುಂದರಿಯನ್ನು ಧ್ಯಾನ ಮಾಡಿ ಸಗುಣರೂಪದಿಂದ ಸಾಕ್ಷಾತ್ಕಾರ ಮಾಡಿಕೊಂಡರು. ಆ ಮಹಾಶಕ್ತಿಯ ವರ್ಣನೆಯೇ ಸೌಂದರ್ಯ ಲಹರಿಯು. ಈ ಗ್ರಂಥಕ್ಕೆ ಮುನ್ನುಡಿ ಬರೆಯುವದು ಮಾನವನಿಂದ ಸಾಧ್ಯ ವಾಗಲಾರದು. ಕಾರಣ ಇದಕ್ಕೆ ಹಿನ್ನುಡಿಯೆನ್ನುವದು ಹೆಚ್ಚು ಶ್ರೇಯಸ್ಕರವು. ಈ ಗ್ರಂಥವು ಸಂಸ್ಕೃತ- ಶ್ಲೋಕಗಳಿಂದ ಪ್ರಚಾರದಲ್ಲಿರುವದು. ಇದು ಉಪನಿಷತ್ತುಗಳಂತೆ ಜ್ಞಾನಕಾಂಡ ರೂಪವಾಗಿದೆ. ಶಿವಶಕ್ತ್ಯಾತ್ಮಕವಾದ ಈ ಗ್ರಂಥದಲ್ಲಿ ಒಂದರಿಂದ ನಾಲ್ವತ್ತೊಂದು ಶ್ಲೋಕಗಳಿಗೆ "ಆನಂದಲಹರೀ" ಎಂದೂ ಮುಂದಿನವುಗಳಿಗೆ "ಸೌಂದರ್ಯ ಲಹರೀ" ಎಂದೂ ಹೆಸರು. ಈ ಸೌಂದರ್ಯ ಲಹರಿಯನ್ನು ಉಪಾಸನೆ ಮಾಡಿದವ ಭಕ್ತನು ಸಾಯುಜ್ಯ ಮುಕ್ತಿಯನ್ನು ಪಡೆಯುತ್ತಾನೆ. ಇದು ಸಂಸ್ಕೃತ ಬಾರದಿದ್ದ ಭಕ್ತರಿಗೆ ತಿಳಿಯಲಾರದು. ಈ ಕೊರತೆಯನ್ನು ನೀಗಿಸಲು "ಶ್ರೀ ಲಕ್ಷ್ಮಣ ವಿರೂಪಾಕ್ಷ ಜೋಶಿ" ಇವರು ಪ್ರಯತ್ನಮಾಡಿ ಇಪ್ಪತ್ತನಾಲ್ಕು ಮಾತ್ರೆಗಳುಳ್ಳ ನಾಲ್ಕು ಪಾದಗಳ ಕಾವ್ಯವನ್ನು ಶ್ರೀಭಗವತಿಯ ಕೃಪೆಯಿಂದಲೇ ಬರೆದಿರುವರು. ಸಂಸ್ಕೃತದಲ್ಲಿ ರಚಿಸಿದ ಕಾವ್ಯದ ಅರ್ಥ ಹಾಗೂ ಭಾವಗಳಿಗೆ ಚಾಚೂ ಬದ ಲಾಗದಂತೆ ಬಣ್ಣಿಸಿದ್ದಾರೆ. ಭಗವತಿಯು ಮನುಷ್ಯ ಶರೀರದಲ್ಲಿ ವ್ಯಾಪಿ ಸಿದ್ದನ್ನು ಈ ಕೆಳಗಿನ ಪದ್ಯದಿಂದ ವರ್ಣಿಸಿರುವದನ್ನು ನೋಡಬಹುದು.

ನೀನು ಮೂಲಾಧಾರ ಚಕ್ರದ ಪೃಥಿವಿ ತತ್ವವ ಭೇದಿಸಿ ।
ಎಸೆವ ಮಣಿಪುರ ಚಕ್ರದೊಳಗಿಹ ಜಲದ ತತ್ವವ ಭೇದಿಸಿ ॥
ಮತ್ತೆ ಸ್ವಾಧಿಸ್ಥಾನ ಚಕ್ರದ ಅಗ್ನಿತತ್ವವ ಭೇದಿಸಿ ।
ವರ ಅನಾಹತ ಚಕ್ರದೊಳಗಿಹ ವಾಯು ತತ್ವವ ಭೇದಿಸಿ ॥೧೨॥

ಹೀಗೆ ಪಂಚ ಭೂತ ತತ್ವಗಳನ್ನು ಭೇದಿಸಿ ತನ್ನ ಪತಿಯೊಂದಿಗೆ ಸಹಸ್ರಾರ ಚಕ್ರದಲ್ಲಿ ವಿಹರಿಸುತ್ತಿರುವಳು, ಎಂದು ವರ್ಣಿಸಿರುವರು. ಅಂದರೆ ಮನುಷ್ಯ ನೆಂದರೆ ಆ ಮಹಾ ಆದಿಶಕ್ತಿಯ ಅಂಶವೇ ಎಂಬುದು ಇದರಿಂದ ಕಲ್ಪಿಸಲು

Sri Vidyabharathi Book Centre, Sringeri

CC-O. In Public Domain. Digitized by eGangotri

ಶಕ್ಯವಾಗುವದು. ಈ ಅನುಭವ ಪಡೆಯಲು ಯೋಗಿಗಳು ಪ್ರಯತ್ನ ಮಾಡುತ್ತಿರುವರು. ಈ ಶಕ್ತಿಯ ರೂಪವೇ ಶ್ರೀಚಕ್ರವೆಂದು ಈ ಕೆಳಗಿನ ಪದ್ಯದಿಂದ ತೋರಿಸಿರುವರು.

ಶಿವನಿಗಿಂತಲು ಭಿನ್ನರಾಗಿಹ ಐದು ಶಕ್ತಿಗಳಿಂದಲಿ ।
ಮತ್ತೆ ಒಂಬತ್ತು ಮೂಲ ಪ್ರಕೃತಿಗಳಿಂದ ಎಂಟರ ದಳಗಳ ॥
ಸರಸ ಷೋಡಶ ದಳದಿ ಶೋಭಿತ ಎರಡು ಕಮಲಗಳಿಂದಲಿ ।
ವರ ತ್ರಿಕೋಣದ ಸಹಿತ– ನಾಲ್ವತ್ತಿನಾಲ್ಕು
ಕೋಣದೊಳಿಸೆವುದು ॥೧೬॥

ಆದಿಶಕ್ತಿಯು ಅಂಗಾಂಗಳನ್ನು ಸುಲಭ ಶಬ್ದಗಳಲ್ಲಿ ಅರ್ಥಕ್ಕೆ ವ್ಯತ್ಯಯ ಬರದಂತೆ ಅಲಂಕಾರ ಯುಕ್ತವಾಗಿ ಮನಸೆಳೆಯುವಂತೆ ವರ್ಣಿಸಿರುವದನ್ನು ಈ ಕೆಳಗಿನ ಪದ್ಯದಲ್ಲಿ ಕಾಣಬಹುದು.

ಜನನಿ ನಿನ್ನಯ ಕೇಶಪಾಶದ ಅಂಧಕಾರವು ಬಲದಲಿ ॥
ಸೂರ್ಯ ಕಿರಣವ ಹಿಡಿದು ತರುತಿರಲಿ ಸೆರೆಯನಿರಿಸಿದ ತೆರದಲಿ ।
ಹೊಳೆವ ಕುಂಕುಮ ತಿಲಕದಿಂದಲಿ ಎಸೆವ ವದನದ ಕಾಂತಿಯು
ಹರಿಯುತಿರುವುದೋ ಎಂಬ ತೆರದಲಿ ಕಾಣುತಿರುವದು ಬೈತಲೆ ॥೬೭॥

ಹೀಗೆ ದೇವಿಯ ಎಲ್ಲ ಅಂಗಾಂಗಗಳನ್ನು ಬಹು ಸುಂದರವಾಗಿ ಪ್ರಶಂಸೆ ಮಾಡಿರುವದು ಗ್ರಂಥಕರ್ತರ ಭಾವವನ್ನು ವ್ಯಕ್ತ ಪಡಿಸುವದು. ಈ ಗ್ರಂಥವು ಭಕ್ತಜನರಿಗೆ ನಿತ್ಯ ಪಾರಾಯಣಕ್ಕೆ ಕನ್ನಡಿಗರಿಗೆ ಬಹಳ ಉಪಯುಕ್ತವಾಗಿರುವದು. ಈ ಗ್ರಂಥ ಪಾರಾಯಣದಿಂದ ಆದಿಶಕ್ತಿ ತ್ರಿಪುರಾಂಬಾಳ ಕೃಪೆಗೆ ಭಕ್ತನು ಪಾತ್ರನಾಗುವನು. ಕಾರಣ ಭಕ್ತಜನರು ಈ ಗ್ರಂಥದ ಮಹಿಮೆಯಿಂದ ಮುಕ್ತಿಯನ್ನು ಪಡೆದರೆ ಗ್ರಂಥಕರ್ತರ ಶ್ರಮವು ಸಾರ್ಥಕವಾಗುವದು.

ಲಕಮನಹಳ್ಳಿ ಓಣಿ, ಮಹಾದೇವ ದೀಕ್ಷಿತ
ಧಾರವಾಡ– ೧
೧೮–೨–೮೫

Sri Vidyabharathi Book Centre, Sringeri

CC-O. In Public Domain. Digitized by eGangotri

ಪಂಡಿತ ಪುಕ್ಕಾಂಡ ಬ್ರಹ್ಮಶ್ರೀ ಭಾಲಚಂದ್ರ ಶಾಸ್ತ್ರಿಗಳು, ಉಪ್ಪಿನಬೆಟಗೇರಿ, ಇವರ ಆಶೀರ್ವಚನ

ಶ್ರೀ ಶಂಕರಃ ಶರಣಂ !

ಶ್ರೀಮತ್ ಶಂಕರ ಭಗವತ್ಪಾದಾಚಾರ್ಯರ ಪ್ರಸ್ಥಾನತ್ರಯ ಭಾಷ್ಯ ಕೇವಲ ವೇದಾಂತ ವಿಷಯಗಳನ್ನು ನಿರೂಪಿಸುತ್ತವೆ. ಅವು ಸಾಧಕರು, ಸಕಲ ಶಾಸ್ತ್ರಜ್ಞರು ಆಗಿರತಕ್ಕವರಿಗೆ ಮಾತ್ರ ಉಪಯುಕ್ತವಾಗಿವೆ. ಅವರು ಮಂಧ್ಯ ಮಾಧಿಕಾರಿಗಳಿಗೋಸ್ಕರ ಅನೇಕ ಪ್ರಕರಣ ಗ್ರಂಥಗಳನ್ನು ಮಾಡಿದ್ದಾರೆ. ಅದರಂತೆ ಮಂತ್ರ ಶಾಸ್ತ್ರದ ಪ್ರಪಂಚಸಾರ ಮಂಂತಾದ ಗ್ರಂಥಗಳು ಅನೇಕ ದೇವತಾ ಸ್ತೋತ್ರಗಳು ಅಧಿಕಾರಿಗಳ ಯೋಗ್ಯತೆಗೆ ಅನುಸರಿಸಿ, ಮುಮುಕ್ಷು ಮಾಡುವದಕ್ಕೋಸ್ಕರ ರಚಿಸಿದ್ದಾರೆ. ಅವುಗಳಲ್ಲಿ ಮಂದಾಧಿಕಾರಿಗಳಿಗೆ ಅನೇಕ ತಮ್ಮ ತಮ್ಮ ಅಭಿರುಚಿಗೆ ಉಚಿತವಾದ ದೇವತೆಗಳಲ್ಲಿ ಭಕ್ತಿ ಉಪಾಸನಾದಿಗಳು ಉತ್ಪನ್ನವಾಗುವಂತೆ ಸರಳ ಶ್ಲೋಕಗಳು ಕಂಡುಬರುತ್ತವೆ. ಆದರೆ ಶಿವಾನಂದ ಲಹರಿ, ಸೌಂದರ್ಯ ಲಹರೀ, ಆನಂದ ಲಹರಿ, ಶಿವ, ಕೇಶಾದಿ ಪಾದಾಂತ ವರ್ಣನೆ ಮುಂಂನಾದ ದೊಡ್ಡ ದೊಡ್ಡ ಸ್ತೋತ್ರಗಳು ತತ್ವಜ್ಞಾನದ ವಿಷಯಗಳನ್ನು ಕರ್ಮ, ಭಕ್ತಿ, ಉಪಾಸನೆಗಳ ವಿಷಯಗಳನ್ನು ಪ್ರತಿಪಾದಿಸುತ್ತವೆ. ಅಂಥ ಸ್ತೋತ್ರಗಳಲ್ಲಿ 'ಸೌಂದರ್ಯ ಲಹರೀ' ಎಂಬ ಆದಿಶಕ್ತಿಯಾದ ಶ್ರೀ ತ್ರಿಪುರ ಸುಂದರೀ ಸ್ತೋತ್ರವು ಅತ್ಯಂತ ಗಂಭೀರವೂ, ಮಂತ್ರ. ತಂತ್ರ; ಯಂತ್ರ ಶಾಸ್ತ್ರಗಳಿಂದ ಕೂಡಿದ್ದಲ್ಲದೆ, ಕರ್ಮ, ಭಕ್ತಿ ಜ್ಞಾನಗಳಿಂದಲೂ ಸಾಧಕ ಜನರಿಗೆ ಅನೇಕ ರೀತಿಯಿಂದ, ಅಂದರೆ ತಮ್ಮ ತಮ್ಮ ಅಭೀಷ್ಟ ಲೌಕಿಕ ಕಾಮನೆಗಳ ಪೂರ್ಣದಿಂದಲೂ ಉಪಯುಕ್ತವಾಗಿದ್ದರಿಂದ ಮಹತ್ವಪೂರ್ಣವಾಗಿದೆ. ಇಂಥ ಮೂಲ ಸಂಸ್ಕೃತದಲ್ಲಿದ್ದ ಸ್ತೋತ್ರವು ಅನೇಕ ಮಹಾಪಂಡಿತರ ಟೀಕೆ, ವ್ಯಾಖ್ಯಾನಗಳಿಂದ ವಿವರಿಸಲ್ಪಟ್ಟರೂ ಕೂಡ ಸಾಮಾನ್ಯ ಜನರಿಗಾಗಲಿ ವಿಶೇಷವಾಗಿ ಕನ್ನಡಿಗರಿಗಾಗಲಿ ತಿಳಿಯುವದು ದುಸ್ತರವಾದ ಮೂಲಕ ಪ್ರಕೃತ ಅನುವಾದಕರ್ತರಾದ ಶ್ರೀ ಲಕ್ಷ್ಮಣ ವಿರೂಪಾಕ್ಷ ಜ್ಯೋಶಿ, ಇವರು ಶ್ರೀ ದೇವತಾ ಪ್ರೇರಣೆಯಿಂದಲೇ ಅದರ

Sri Vidyabharathi Book Centre, Sringeri

CC-O. In Public Domain. Digitized by eGangotri

ಕನ್ನಡ ಅನುವಾದವನ್ನು ತಂಬ ಶ್ರಮಪಟ್ಟು ಸರಳವಾಗಿಯೂ ಸುಗಮವಾಗಿಯೂ ಮಾಡಿದ್ದನ್ನು ತಿಳಿದು ಬಹಳ ಸಂತೋಷವಾಗುತ್ತದೆ. ಇದರಂತೆ ನಿತ್ಯೋಪಯೋಗಿಗಳಾದ, ಕ್ಷಣ ಕ್ಷಣಕ್ಕೂ ಮನುಷ್ಯನನ್ನು ಎಚ್ಚರಿಸುವ ವಿಷಯಗಳಿಂದ ಕೂಡಿದ ಚರ್ಪಟ ಪಂಜರಿಕಾ, ದ್ವಾದಶ ಪಂಜರಿಕಾ, ಈ ಸ್ತೋತ್ರಗಳ ಅನುವಾದಗಳನ್ನು ಮಾಡಿ ಕನ್ನಡಿಗರಿಗೆ ಉಪಕಾರ ಮಾಡಿದ್ದಾರೆ. ಇವರ ಶ್ರಮವು ವಾಚಕರಿಂದ ಸಫಲವಾಗಿ ಶ್ರೀ ದೇವಿಯ ಹಾಗೂ ಶ್ರೀ ಭಗವತ್ಪಾದಾಚಾರ್ಯರ ಕೃಪೆಗೆ ಇವರು ಪಾತ್ರರಾಗಬೇಕೆಂದು ನಾವು ಶ್ರೀಗುರುಗಳಲ್ಲಿ ಪ್ರಾರ್ಥಿಸುತ್ತೇವೆ.

ಭಾಲಚಂದ್ರ ಶಾಸ್ತ್ರಿ ಉಪ್ಪಿನಬೆಟಗೇರಿ

ಶ್ರೀ ಜಗದ್ಗುರು ಶಂಕರಾಚಾರ್ಯ
ಸಂಸ್ಕೃತ ಪಾಠಶಾಲಾ, ಧಾರವಾಡ
ಶ್ರೀಶಕೆ ೧೯೦೭ ಕ್ರೋಧನ ನಾಮಸಂವತ್ಸರ
ಚೈತ್ರಶುದ್ಧ ಪ್ರತಿಪದ (ಯುಗಾದಿ)

Sri Vidyabharathi Book Centre, Sringeri

CC-O. In Public Domain. Digitized by eGangotri

ಅನುವಾದಕರ ನುಡಿ

ಶ್ರೀಶಂಕರ ಭಗವತ್ಪಾದರು. ಭಾರತದಲ್ಲಿ ಬೌದ್ಧಧರ್ಮವು ಪ್ರಸಾರವಾಗುತ್ತ, ಸನಾತನ ಧರ್ಮವು ನಾಶವಾಗುತ್ತಿರುವ ಕಾಲದಲ್ಲಿ ಜನ್ಮತಾಳಿದರು, ವೇದೋಕ್ತ ಧರ್ಮವನ್ನೂ ಪುನರುಜ್ಜೀವನಗೊಳಿಸಿದರು. ದೇಶವನ್ನು ಸಂಚರಿಸಿ, ಪೂರ್ವ ಪಶ್ಚಿಮ ದಕ್ಷಿಣ ಮತ್ತು ಉತ್ತರ ದಿಕ್ಕುಗಳಲ್ಲಿ ಪೀಠಗಳನ್ನು ಸ್ಥಾಪಿಸಿ ಸನಾತನ ಧರ್ಮವನ್ನು ಪ್ರಸಾರ ಮಾಡಿದರು. ಬ್ರಹ್ಮಸೂತ್ರ, ಉಪನಿಷತ್ತು ಮತ್ತು ಭಗವದ್ಗೀತೆಗೆ ಭಾಷ್ಯಗಳನ್ನು ಬರೆದರು, ಶಿವಪರ, ವಿಷ್ಣುಪರ ಮತ್ತು ಅನೇಕ ದೇವ ದೇವತೆಯರ ಸ್ತೋತ್ರಗಳನ್ನೂ, ತಾರತಮ್ಯವಿಲ್ಲದೆ ಭಕ್ತಿಪೂರ್ವಕವಾಗಿ ಸುಮಧುರ ಕಾವ್ಯ ಶೈಲಿಯಲ್ಲಿ ಬರೆದಿದ್ದಾರೆ. 'ಸೌಂದರ್ಯ ಲಹರಿಯು' ಅವರು ರಚಿಸಿರುವ ಅತ್ಯುತ್ತಮ ಸ್ತೋತ್ರಗಳಲ್ಲಿ ಒಂದಾಗಿದೆ. ಹಿಮಾಲಯದಿಂದ, ಗಂಗೆಯು ಹರಿದುಬರುವಂತೆ ಶ್ರೀ ಶಂಕರ ಭಗವತ್ಪಾದರ ಹೃದಯದಿಂದ ಸ್ಫೂರ್ತಿಯಿಂದ, ಮಂಜುಳ ಸ್ವರದ ಲಲಿತ ಪದಗಳಲ್ಲಿ ಹರಿದು ಬಂದಿದೆ. ಆದಿಶಕ್ತಿಯ ರೂಪದಲ್ಲಿ 'ಸರ್ವಂ ಖಲ್ವಿದಂ ಬ್ರಹ್ಮಂ' ಎಂಬ ತತ್ವವನ್ನು ನಿರೂಪಿಸಿದ್ದಾರೆ. ಪಂಚ ಭೂತಾತ್ಮಕವಾದ ವಿಶ್ವವು, ಎಲ್ಲವು ಪರಬ್ರಹ್ಮನಿಂದ ತುಂಬಿದೆ ಎಂದು ವಿಸ್ತಾರವಾಗಿ ಕಾವ್ಯಮಯ ಶೈಲಿಯಲ್ಲಿ ವಿಶದಪಡಿಸಿದ್ದಾರೆ.

ಸೌಂದರ್ಯ ಲಹರಿಯಲ್ಲಿ ಆದಿ ಶಕ್ತಿಯನ್ನು, ಲೋಕಮಾತೆ, ಜಗಜ್ಜನನಿ, ತಾಯಿ ಎಂದು ಮಾತೃರೂಪದಲ್ಲಿ ಸ್ತುತಿಸಿದ್ದಾರೆ. ತಾಯಿಯ ಬಗ್ಗೆ ಅವರಿಗೆ ಗೌರವ, ಅನನ್ಯವಾದ ಭಕ್ತಿ ಮತ್ತು ಪ್ರೀತಿ ಇದ್ದಿತು. 'ಕಂಪುತ್ರೊ ಜಾಯೆತ್ ಕ್ವಚಿದಪಿ ಕುಮಾತಾ ನ ಭವತಿ'– ಕೆಟ್ಟ ಮಗನು ಹುಟ್ಟಬಹುದು ಆದರೆ ಕೆಟ್ಟ ತಾಯಿ ಎಂದೂ ಹುಟ್ಟುವದಿಲ್ಲ ಎಂದು ಹೇಳಿದ್ದಾರೆ. ಅವರು ಸನ್ಯಾಸಿಯಾಗಿದ್ದರೂ ಕೂಡ, ತಾಯಿಯ ಮರಣಕಾಲದಲ್ಲಿದ್ದು ಅಂತ್ಯಕ್ರಿಯೆಯನ್ನು ತಾವೇ ಮಾಡಿದರು. ತಾಯಿಗೆ ಅವರು ತೋರಿದ ಪ್ರೀತಿ, ಭಕ್ತಿ ಅಸಾಮಾನ್ಯವಾದುದು. ಆದುದರಿಂದ, ಇದರಲ್ಲಿ ಆದಿಶಕ್ತಿಯನ್ನು ಅನೇಕ ಸಲ ಜನನಿ, ಮಾತೆ, ಎಂದು ಕರೆದಿದ್ದಾರೆ. ತಾನು ದ್ರಾವಿಡ ಶಿಶುವು ಎಂದುಕೊಂಡಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ನೀನು ಕರುಣಾಮಯಿಯು ಇತ್ತಿಹ ಸ್ತನವ ಪಾನವ ಗೈದಿಹ
ನಾನು ದ್ರಾವಿಡ ಶಿಶುವು ಎನ್ನನು ಪ್ರೌಢಕವಿಗಳು ಹೊಗಳ್ವರು ॥೧೧೦॥

ತಾಯಿಯು ಯಾವಾಗಲೂ ಮಂಕ್ಕಳನ್ನು ಕರುಣಾದೃಷ್ಟಿಯಿಂದ ನೋಡುತ್ತಾಳೆ. ಬೇಡಿದುದನ್ನು ಕೊಡುತ್ತಾಳೆ. ಶ್ರೀಶಂಕರಭಗವತ್ಪಾದರು ದೇವಿಯನ್ನು ಬ್ರಹ್ಮ ವಿದ್ಯೆಯನ್ನು ಕೊಡು ಎಂದು ಹೀಗೆ ಪ್ರಾರ್ಥಿಸುತ್ತಾರೆ.

ಬ್ರಹ್ಮವಿದ್ಯೆಯ ಆರಿಯಲೋಸುಗ ನಾನು ಆಶಿಸುತಿರುವೆನು
ಕೆಂಪುಲಾಕ್ಷಾರಸದಿ ಶೋಭಪ ನಿನ್ನ ಪಾದದ ತೀರ್ಥವ
ಎಂದು ಮನದಣಿ ಕುಡಿದು ಹರ್ಷದಿ ಜನ್ಮ ಸಾರ್ಥಕ ಎನಿಪುದೊ
ಪುಣ್ಯ ಗಂಗೆಯ ಜಲದ ತೆರದಲಿ ಎನಗೆ ಮುಕ್ತಿಯನೀವುದೊ ॥೧೪೯॥

ಆದಿಶಕ್ತಿಯ ರೂಪದಲ್ಲಿ ಪ್ರಬ್ರಹ್ಮ ಸ್ವರೂಪವನ್ನು ಮತ್ತು ಪರಬ್ರಹ್ಮ ಸಾಕ್ಷಾತ್ಕಾರವನ್ನು ಪಡೆಯುವ ರೀತಿಯನ್ನೂ ವರ್ಣಿಸಿದ್ದಾರೆ.

ಆದಿಶಕ್ತಿಯ ಮಹಿಮೆಯನ್ನು ಹೀಗೆ ವರ್ಣಿಸಿದ್ದಾರೆ:

ಸೃಷ್ಟಿಕರ್ತನು ಬ್ರಹ್ಮದೇವನು ನಿನ್ನ ಪಾದದ ಧೂಳಿಯ
ಶಿರದಿ ಧರಿಸುತ– ಆದರ ಮಹಿಮೆಯ ಬಲದಿ ಜಗವನು ಸೃಜಿಸುವ
ವಿಷ್ಣುದೇವನು ನಿನ್ನ ಪಾದದ ಚರಣಕಮಲದ ಧೂಳಿಯ
ತನ್ನ ಸಾವಿರ ಶಿರದಿ ಧರಿಸುವ ಪರವು ಮಹಿಮೆಯಳು ನೀನಿಹೆ ॥೩॥

ಹರನು ನಿನ್ನಯ ಚರಣ ಧೂಳಿಯ ವರವಿಭೂತಿಯ ತೆರದಲಿ
ತನ್ನ ದೇಹದಿ ಧರಿಸಿಕೊಳ್ಳುತ ಭಕ್ತ ಜನರನು ಪೊರೆಯುವ ॥೪॥

ಆದಿಶಕ್ತಿಯ ವಾಸಸ್ಥಾನವಾದ ಶ್ರೀ ಚಕ್ರವನ್ನು ೧೪ ಮತ್ತು ೧೫ನೇ ಪದ್ಯಗಳಲ್ಲಿ ವಿವರಿಸಿದ್ದಾರೆ.

ಆದಿಶಕ್ತಿಯು ಜಗತ್ತಿನ ಎಲ್ಲ ಸೌಂದರ್ಯದ ಸಾರ ಸರ್ವಸ್ವದ ನಿಧಿ– ಅವರ ಲಲನೆಯರಿಗೆ ಆಕೆಯ ಬಿಂದು ಮಾತ್ರವು ಸೌಂದರ್ಯ ಇಲ್ಲ. ಅವರು ಶಿವನ ಸಾನ್ನಿಧ್ಯವನು ಪಡೆದರು ತಪಸ್ಸಿನಿಂದಾಗಿ.

CC-O. In Public Domain. Digitized by eGangotri

CC-O. In Public Domain. Digitized by eGangotri

ಆ ಹಿಮಾಲಯ ಗಿರಿಯ ತನಯಳಿ ಆಜನ ಕವಿವರ ಶ್ರೇಷ್ಠರ
ನಿನ್ನ ಅನುಪಮ ದಿವ್ಯ ಸೌಂದರ್ಯವನ ವರ್ಣಿಸಲರಿಯರ
ನೂರುಸಾವಿರ ವರುಷ ತಪಸಿಗೆ ಕಾರಣಲಾರದ ಸೊಬಗನ
ಶಿವನ ಮಾತ್ರವೆ ಸವಿವ ನಿನ್ನಯ ದಿವ್ಯ ಸಿರಿ ಸೌಂದರ್ಯವ ॥೧೭॥

ಕಾಣಲೋಸುಗ ನಿನ್ನ ಚೆಲುವಿನ ಬಿಂದು ಮಾತ್ರವು ಇಲ್ಲದ
ಸೊಗಸಲಾರದ ಅಮರ ಸ್ತ್ರೀಯರ ಅತುಳ ಕಾತರದಿಂದಲಿ
ಶಿವನ ಸಾಯುಜ್ಯವನು ಪಡೆಯಲು ತವಕ ಪಡುವರ ಸತತವು
ಇನ್ನು ಪಾಮರ ನರರ ಕಾಂಬುವರೆಂತು ನಿನ್ನಯ ಚೆಲುವನು ॥೧೮॥

ಆದಿಶಕ್ತಿಯ ಶಿರದ ಬೈತಲೆಯಿಂದ ಪಾದದ ಉಗುರಿನವರೆಗೆ ಎಲ್ಲ ಅವಯವಗಳನ್ನು ವರ್ಣಿಸಿದ್ದಾರೆ. ದೇವಿಯ ವರ್ಣನೆ ಕೇವಲ ಸಾಂಕೇತಿಕ ವಾಗಿರುತ್ತದೆ. ಅದರಲ್ಲಿ ವಿಶ್ವವೆಲ್ಲ ವ್ಯಾಪಿಸಿರುವ ಪರಬ್ರಹ್ಮನ ವರ್ಣನೆ ಇದೆ.

ತಾವು ಮಾಡುವ ಕ್ರಿಯೆಗಳೆಲ್ಲವೂ ನಿನಗೆ ಅರ್ಪಿತವೆಂದು ಆದಿಶಕ್ತಿಯನ್ನು ಹೊಗಳಿದ್ದಾರೆ.

ವಿಶ್ವಮಾತೆಯ ನಾನು ನುಡಿಯುವ ನುಡಿಗಳೆಲ್ಲವು ನಿನ್ನಯ
ಭಕ್ತಿಯಿಂದಲಿ ಒಲಿದು ಭಜಿಸುವ ದಿವ್ಯ ಮಂತ್ರಗಳಾಗಲಿ
ನಾನು ಮಾಡುವ ಅಂಗ ಚೇಷ್ಟೆಯು ನಿನ್ನ ಮುದ್ರೆಯು ಆಗಲಿ
ನಾನು ನಡೆಯುವ ನಡಿಗೆ ನಿನ್ನಯ ವರ ಪ್ರದಕ್ಷಿಣೆಯಾಗಲಿ ॥೫೯॥

ನಾನು ಮಾಡುವ ಊಟ ನಿನ್ನಯ ಹವಿಸು ಆಗಲಿ ತಾಯಿಯೆ
ನಿಲದಿ ಹೊರಳುವದೊಲಿದು ಮಾಡುವ ಎನ್ನ ಶಿರಸಾಷ್ಟಾಂಗವು
ಸಕಲ ಇಂದ್ರಿಯ ಚೇಷ್ಟೆಯಿಂದಲಿ ನಾನು ಗೈಯುವ ಕ್ರಿಯೆಗಳು
ಶಿವನಿಗರ್ಪಿತವೆನುತ ಗೈದಿಹ ಭಕ್ತಿ ಪೂಜೆಯು ಆಗಲಿ ॥೪೦॥

ದೇವಿಯ ದಿವ್ಯ ಮೂರ್ತಿಯನ್ನು ಹೃದಯದಲ್ಲಿ ಸತತವು ನೆನೆಯುತ್ತೇನೆ ಎಂದು ಹೇಳಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಂಥರ ಮಕರಂದವನಂ ಸವಿಯುತ– ಮೈಯಂ ಮರೆತಿಹ
ಯೋಗಿಯ
ಹೃದಯ ಪದ್ಮಾನಸ ವರಸರೋವರದೊಳಗೆ ವಾಸವ ಮಾಡುವ
ದಿವ್ಯ ಅನುಪಮ ಮಹಿಮೆಯಿಂದಲಿ ಎಸೆವ ಶಿವನನಂ ಮತ್ತೆಯಂ
ಶಕ್ತಿದೇವಿಯ ನಾನಂ ಭಜಿಪೆನು ಏಕ ಚಿತ್ತದಿ ಸತತವು ॥೫೮॥

ದೇವಿಯ ಕಣ್ಣುಗಳನ್ನು ಹೀಗೆ ವರ್ಣಿಸಿದ್ದಾರೆ–

ದೇವಿ ನಿನ್ನಯ ಬಲದ ನಯನವು ಸೂರ್ಯನಂತೆಯೆ ಹೊಳೆಯುತ
ದಿನವ ಮಾಳ್ಪುದು ಎಡದ ನಯನವು ಚಂದ್ರನಂತೆಯೆ ಮಿರುಗುತ
ರಾತ್ರಿ ಗೈಯುತ ಮತ್ತೆ ಅರಳಿದ ಹೇಮಕಾಂತಿಯ ಕಮಲದ
ಪರಿಯ ಮೂರನೆ ನಯನ ಸಾಯಂ ಉಷೆಯ ಸೃಜಿಸುತ
ಲಿರುವುದು ॥೭೨॥

ಆದಿಶಕ್ತಿಯ ನೋಟವು ಕರುಣಾಪೂರಿತವಾದದ್ದು ಭವದ ಎಲ್ಲ ಕಷ್ಟ ಗಳನ್ನು ದೂರಮಾಡಿ ಸಕಲ ಕಾರ್ಯಗಳನ್ನು ಸಿದ್ಧಿಗೊಳಿಸುತ್ತದೆ.

ತಾಯೆ ನಿನ್ನಯ ನೋಟವಿರುವದು ಬಹು ವಿಶಾಲವು ಶುಭಕರ
ಮತ್ತೆ ದುರ್ಜಯ ಕರುಣೆಪೂರಿತ ಏನು ತಿಳಿಯದ ಮಧುರವು
ವಿವಿಧ ಭೋಗವ ನೀಡುತಿರುವುದು ಭಕುತ- ಜನರನು ಪೊರೆವುದು
ಸಕಲ ಕಾರ್ಯವು ಸಿದ್ಧಿಗೊಳ್ಳುತ ವಿಜಯಿಯಹಾಗುತ ಮೆರೆವುದು ॥೭೩॥

ದೇವಿಯ ಮುಖಿಚಂದ್ರಮನ ಬೆಳದಿಂಗಳಿನ ವರ್ಣನೆಯ ವೈಖರಿ ಯನ್ನು ನೋಡಿರಿ.

ನಿನ್ನ ಮುಖ ಚಂದ್ರಮನ ಬೆಳದಿಂಗಳಿನ ಅಮೃತವ ಕುಡಿಯುತ
ಆ ಚಕೋರದ ಪಕ್ಷಿನಿಕರಕೆ ಅರುಚಿಯಾಗಲು ಅತುಳದಿ
ತಮ್ಮ ಜಿವ್ಹೆಯ ಅರುಚಿಕಳೆಯಲು ಪಕ್ಷಿನಿಕರವು ನಿಶೆಯಲಿ
ಹುಳಿಯ ರುಚಿಗಹ ಚಂದ್ರ ಕಿರಣದ ಪ್ರಭೆಯ ಕುಡಿಯುತ
Sri Vidyabharathi Book Centre, Sringeri ಲಿರ್ದವು ॥೯೩॥

CC-O. In Public Domain. Digitized by eGangotri

ದೇವಿಯ ಮುಖ ಚಂದ್ರಮನ ಬೆಳದಿಂಗಳಿನ ಕಾಂತಿಯನ್ನು ಕಂಡಿ ಕಂಡಿದು ನಾಲಗೆಯು ಅರುಚಿಯಾಗಿ ಕೆಟ್ಟುಹೋದವು. ನಾಲಗೆಯ ಅರುಚಿ ಯನ್ನು ಕಳೆದುಕೊಳ್ಳಲು ಹುಳಿಯಾಗಿರುವ ಚಂದ್ರಮನ ಕಿರಣದ ಕಾಂತಿ ಯನ್ನು ಕುಡಿಯುತ್ತಿದ್ದವಂತೆ. ಎಂದರೆ ದೇವಿಯ ಮುಖ ಚಂದ್ರಮನ ಕಾಂತಿಯು ಚಂದ್ರನುನ ಕಾಂತಿಗಿಂತ ಹೆಚ್ಚು ಸವಿಯಾಗಿತ್ತಂತೆ. ಇಂತಹ ಅನೇಕ ಉಪಮೆ, ಅಲಂಕಾರಗಳು ಪ್ರತಿಯೊಂದು ಪದ್ಯದಲ್ಲಿಯೂ ಅಡಗಿವೆ. ಅದನ್ನು ಓದಿಯೇ ಸವಿಯಬೇಕು. ಇಲ್ಲಿ ಕಾವ್ಯದ ಅಲಂಕಾರ, ಉಪಮೆ, ಛಂದಸ್ಸು ರಸಾನುಭವ ಎಲ್ಲವೂ ಇದೆ. ಇದು ರಸವೌತಣ. ಸೌಂದರ್ಯ ಲಹರಿಯು ಅಮೃತ ಸಾಗರದಲ್ಲಿ, ಕಾವ್ಯರಸಿಕರು ಮುಂದು ಕಾವ್ಯಾನಂದವನ್ನು ಪಡೆದು ಸಾರ್ಥಕರಾಗಬಹುದು. ಆದಿಶಕ್ತಿಯು ಕರುಣಾಮಯಿಯು, ಸೌಂದರ್ಯದ ನಿಧಿ, ಆನಂದ ಸ್ವರೂಪಿಣಿ, ಆನಂದ ಭೈರವಿ (ಪದ್ಯ ೫೦.) ದೇವಿಯು ದುಷ್ಟ ಶಕ್ತಿಯ ನಾಶಕ್ಕಾಗಿ ಚಂಡಿಯಾಗುತ್ತಾಳೆ. ಚಾಮುಂಡಿ ಯಾಗುತ್ತಾಳೆ. ತ್ರಿಪುರಾಸುರಸನ್ನು ಸಂಹಾರವಾಡುವ ಕಾಲಕ್ಕೆ, ಉಗ್ರ ರೂಪವನ್ನು ತಾಳಿದ ಪರಮೇಶ್ವರನಂತೆ ಭವ್ಯರೂಪದಲ್ಲಿ ಬೆಳಗುತ್ತಾಳೆ. ತ್ರಿಪುರ ಸುಂದರಿಯಾಗುತ್ತಾಳೆ.

ಘೋರ ಭೀಕರ ತ್ರಿಪುರದೈತ್ಯನ ವಧೆಯ ಗೈಯ್ಯುವ ಸಮಯದಿ
ಬಹು ಭಯಂಕರ ರೂಪ ತಾಳಿದ ಆ ಮಹೇಶ್ವರನಂತೆಯೆ
ಬಿಲ್ಲು ಬಾಣವ ಪಾಶ ಅಂಕುಶ ಕರದಿ ಧರಿಸುತ ಭವ್ಯದಿ
ಅಟ್ಟಹಾಸದಿ ಮೆರೆವ ಸುಂದರ ತ್ರಿಪುರ ಸುಂದರಿ ಬೆಳಗಲಿ ॥೧೦॥

ವೇದ ಸಾರವನ್ನು ಅರಿತ ಕೆಲವರು ನಿನ್ನನ್ನು ಬ್ರಹ್ಮನ ಒಲುಮೆಯ ರಾಣಿ, ಪುಣ್ಯ ಶಾರದೆ ಎಂತಲೂ ಮತ್ತೆ ವಿಷ್ಣುವಿನ ನಾಭಿ ಮಧ್ಯದಿ ವಾಸ ಮಾಡುವ ಲಕ್ಷ್ಮಿ ಎಂತಲೂ ಮತ್ತೆ ಕೆಲವರು ಕೈಲಾಸದಲ್ಲಿ ಶಿವನ ಜೊತೆ ಯಲ್ಲಿ ಇರುವ ಪಾರ್ವತಿ ಎಂತಲೂ ಹೇಳುವರು. ಆದರೆ ನೀನು ಮೂವರ ಕಿಂತಲೂ ಭಿನ್ನಳಾಗಿ, ವರ್ಣಿಸಲಾಗದಂಥಹ, ತಿಳಿಯದ ಅತುಳ ಶಕ್ತಿಯು ಮಹಾಮಹಿಮೆಯಾಗಿ ವಿಶ್ವವೆಲ್ಲವನ್ನು ಮೋಹಗೊಳಿಸುತ್ತಿರುವೆ (ಪದ್ಯ – ೧೪೮).

Sri Vidyabharathi Book Centre, Sringeri

CC-O. In Public Domain. Digitized by eGangotri

ಆದಿಶಕ್ತಿಯನ್ನು ಭಜಿಸುವದರಿಂದ ವಿದ್ಯೆ ಐಸಿರಿಯನ್ನು ಪಡೆಯುವರು ಈ ಜೀವನವು ಅವಿದ್ಯೆಯು ಬಂಧನವನ್ನು ಕಳೆದುಕೊಂಡು ಶುದ್ಧಚೈತನ್ಯದಿಂದ ಬೆಳಗುತ್ತ, ಬ್ರಹ್ಮ ಸಾಕ್ಷಾತ್ಕಾರವನ್ನು ಪಡೆದು, ಬ್ರಹ್ಮಾನಂದರಸವನ್ನು ಕುಡಿದು, ಹರುಷದಿಂದ ಲೀನನಾಗುತ ತಾನೆ ತಾನಾಗಿ ಮೆರೆಯುವನು (ಪದ್ಯ– ೧೫೨).

ಕೊನೆಗೆ ಕಡಲಜಲವನು 'ಕಡಲಿಗರ್ಪಿಸಿದಂತೆ' ನಿನ್ನ ಕೃಪೆಯಿಂದ ಬಂದ ನುಡಿಗಳಿಂದ ನಿನ್ನನ್ನು ಸ್ತುತಿಸಿದ್ದೇನೆ ಎಂದಿದ್ದಾರೆ.

ನಿನ್ನ ಕೃಪೆಯಲಿ ಸ್ಫೂರ್ತಿಯಿಂದಲಿ ಬಂದ ನುಡಿಯಲಿ ಹೊಗಳುವೆ
ಇದುವೆ ನೀರಾಂಜನವು ಸೂರ್ಯಗೆ ಎತ್ತಿದಾರತಿಯಂತಿದೆ
ಚಂದ್ರಕಾಂತಿಯ ಶಿಲೆಯು ಜಲವನು ಚಂದ್ರಗರ್ಪಿಸಿದಂತಿದೆ
ಕಡಲ ಜಲವನು ಕಡಲಿಗರ್ಪಿಸಿದಂತೆ– ಇರುವುದು ತಾಯಿಯೆ ॥೧೫೩॥

ಸೌಂದರ್ಯ ಲಹರಿಯು ಮಂತ್ರಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥ. ಇದರಲ್ಲಿ ತಾಂತ್ರಿಕ ವಿಷಯಂಗಳೂ ಅಡಗಿವೆ. ಇದರಲ್ಲಿಯ ಪದ್ಯಗಳನ್ನು ನಿತ್ಯವು ಪಠಿಸುವದರಿಂದ ಮತ್ತು ಜಪಿಸುವದರಿಂದ ಅನೇಕ ರೋಗಗಳು ನಾಶವಾಗುತ್ತವೆ ಎಂದು ಭಾವುಕರು ನಂಬುತ್ತಾರೆ.

ಶ್ರೀ ಶಂಕರಾಚಾರ್ಯರು ರಚಿಸಿದ ಮೂಲ ಸಂಸ್ಕೃತ ಸೌಂದರ್ಯ ಲಹರಿಯನ್ನು, ಕನ್ನಡದಲ್ಲಿ ಕಾವ್ಯರೂಪದಲ್ಲಿ, ಸಾಮಾನ್ಯ ಜನರಿಗೂ ಸಹ ನೇರವಾಗಿ ಅರ್ಥವಾಗುವಂತೆ ಸುಲಭವಾದ, ಸರಳವಾದ ಶೈಲಿಯಲ್ಲಿ ಅನುವಾದ ಮಾಡಿದ್ದೇನೆ. ಕಾವ್ಯದ ಶೈಲಿಯು ಸವಿಯಾದ, ಕ್ಲಿಷ್ಟವಲ್ಲದ ಲಲಿತ ಪದಗಳ ಬಂಧದಿಂದ ಕೂಡಿದೆ. ಇದನ್ನು ನಿತ್ಯವೂ ಪಠಣ ಮಾಡಲಿಕ್ಕೆ ಮತ್ತು ಭಜನೆಯ ರೂಪದಲ್ಲಿ ಹಾಡಲಿಕ್ಕೆ ಬರುತ್ತದೆ.

ಇದನ್ನು ಓದಿ ಅನೇಕ ವಿದ್ವಾಂಸರು ತಮ್ಮ ಮೆಚ್ಚುಗೆಯನ್ನು ವ್ಯಕ್ತ ಪಡಿಸಿದ್ದಾರೆ. ಇದು ಕನ್ನಡ ಸಾಹಿತ್ಯದಲ್ಲಿ ಉತ್ತಮ ಕಾವ್ಯಕೃತಿ ಎಂದು ಹೇಳಬಹುದು. ಕಾವ್ಯರಸಿಕರು ಇದನ್ನು ಓದಿ ಕಾವ್ಯಾನಂದವನ್ನು ಪಡೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಲಿ. ಭಾವುಕರು ಓದಿ, ಪಠಿಸಿ ಬ್ರಹ್ಮಾನಂದವನ್ನು ಪಡೆಯಲಿ ಎಂದು ಹಾರೈಸುತ್ತೇನೆ.

ಪದ್ಯಗಳ ಎಡಭಾಗದಲ್ಲಿ ಮೂಲ ಸಂಸ್ಕೃತ ಶ್ಲೋಕದ ನಂಬರನ್ನು ಮತ್ತು ಬಲಭಾಗದಲ್ಲಿ ಅನುವಾದ ಪದ್ಯಗಳ ನಂಬರನ್ನು ಕೊಟ್ಟಿದೆ. ಮೂಲ ಸಂಸ್ಕೃತ ಶ್ಲೋಕಗಳು ೧೦೦ ಇದ್ದು ಅನುವಾದ ಪದ್ಯಗಳು ೧೫೫ ಇರುತ್ತವೆ.

ಇದರ ಜೊತೆಯಲ್ಲಿ ಶ್ರೀಶಂಕರಾಚಾರ್ಯ ವಿರಚಿತ 'ಭಜಗೋವಿಂದಂ' ಮತ್ತು ದ್ವಾದಶ ಪಂಜರಿಕಾ ಸ್ತೋತ್ರಗಳ ಕನ್ನಡ ಪದ್ಯಾನುವಾದಗಳನ್ನು ಕೊಟ್ಟಿದ್ದೇನೆ. ಕನ್ನಡದ ಜನ ಇವುಗಳನ್ನು ಓದಿ ದೈವಿಕ ಆನಂದವನ್ನು ಪಡೆಯಲಿ ಎಂದು ಹಾರೈಸುತ್ತೇನೆ.

ಶ್ರೀ ಚಿದಂಬರ ಭಕ್ತರೂ ಖ್ಯಾತ ವೇದಾಂತವನ್ನು ಅರಿತವರೂ ಆದ ಶ್ರೀ ಮಹದೇವ ದೀಕ್ಷಿತ, ಧಾರವಾಡ, ಇವರು ಇದಕ್ಕೆ ಅಮೂಲ್ಯವಾದ ಸರಸವಾದ ಮುನ್ನುಡಿಯನ್ನು ಬರೆದಿದ್ದಾರೆ. ನಾನು ಅವರಿಗೆ ತುಂಬ ಕೃತಜ್ಞನಾಗಿದ್ದೇನೆ.

ಪಂಡಿತ ಪ್ರಕಾಂಡ ಬ್ರಹ್ಮಶ್ರೀ ಭಾಲಚಂದ್ರ ಶಾಸ್ತ್ರಿ ಉಪ್ಪಿನಬೆಟಗೇರಿ, ಇವರು ನನ್ನ ಬಿನ್ನಹದ ಮೇರೆಗೆ ಆಶೀರ್ವಾದವನ್ನು ದಯಪಾಲಿಸಿದುದಕ್ಕೆ ಅವರಿಗೆ, ನಾನು ನನ್ನ ಅನಂತ ವಂದನೆಗಳನ್ನು ಸಲ್ಲಿಸುತ್ತೇನೆ.

ಈ ಪುಸ್ತಕವನ್ನು ಆ ಂ ದ ವಾ ಗಿ ಮುದ್ರಿಸಿಕೊಟ್ಟ ಮನೋಹರ ಪ್ರಿಂಟಿಂಗ್ ಪ್ರೆಸ್, ಧಾರವಾಡ ಇವರಿಗೆ ನಾನು ತುಂಬ ಕೃತಜ್ಞನಾಗಿದ್ದೇನೆ.

ಕೆ. ಇ. ಬೋರ್ಡ ಪ್ರಿಂಟಿಂಗ್ ಪ್ರೆಸ್, ಧಾ ರ ವಾ ಡ ದ ವ ರು ಶ್ರೀ ಶಂಕರಾಚಾರ್ಯರ ಪಡಿಯಚ್ಚನ್ನು ಕೊಟ್ಟದ್ದಕ್ಕಾಗಿ ನಾನು ಅವರಿಗೆ ತುಂಬ ಕೃತಜ್ಞನಾಗಿದ್ದೇನೆ.

ಅಲ್ಲಲ್ಲಿ ಮುದ್ರಣ ದೋಷಗಳಾಗಿವೆ. ಒಪ್ಪೋಲೆಯನ್ನು ಕೊಟ್ಟಿದೆ. ಸರಿಪಡಿಸಿಕೊಂಡು ಓದಬೇಕಾಗಿ ನಮ್ರ ವಿನಂತಿ.

ಧಾರವಾಡ- ೭ — ಲಕ್ಷ್ಮಣ ವಿರೂಪಾಕ್ಷ ಜೋಶಿ
೧೫-೨-೮೫

Sri Vidyabharathi Book Centre, Sringeri

CC-O. In Public Domain. Digitized by eGangotri

ಒಪ್ಪೋಲೆ

ಪುಟ	ಪದ್ಯ	ಸಾಲು	ತಪ್ಪು	ಒಪ್ಪು
೩	೧೪	೧	ಸ್ಫೋತ್ರದಿ	ಸ್ಫೋತದಿ
೬	೩೪	೨	ಸಾಯಂಜ್ಯವನಂ	ಸಾಯಂಜ್ಯವನಂ
೭	೩೮	೩	ನಿನ್ಯ	ನಿನ್ನ
೭	೪೧	೪	ಶಿವನಿಗರ್ಪಿತವೆನಂ-ತಗೈದಿಹ	ಶಿವನಿಗರ್ಪಿತವೆನಂತ ಗೈದಿಹ
೯	೪೮	೩	ದಿವ	ದಿವ್ಯ
೧೦	೫೫	೧	ಗೈಯ್ಯುದ	ಗೈಯ್ಯುವ
೧೪	೮೨	೪	ಕಳೆಯಂತಂ	ಕಳೆಯಂತ
೧೫	೮೭	೪	ಕಾಂತಿಯಂ	ಕಾಂತಿಯಂ
೧೭	೯೬	೪	ಸವಿವವರಂ	ಸವಿವರಂ
೧೮	೧೦೩	೪	ಸೌಂದರ್ಯವವಂ	ಸೌಂದರ್ಯವನಂ
೨೧	೧೨೦	೧	ಧ್ಯಾವ	ಧ್ಯಾನವ
೨೪	೧೩೮	೩	ತಪ್ಪ	ತಪ್ಪಿ
೨೫	೧೩೯	೧	ವಿಷ್ಣವು	ವಿಷ್ಣುವು
೨೫	೧೪೧	೨	ರೂಪನ	ರೂಪವ
೨೫	೧೪೧	೪	ಕರೂಣ	ಕರುಣೆ
೨೫	೧೪೩	೪	ಆರಂ ಆಯಂದೆ	ಆರಂ ಅರಿಯಂದೆ
೨೬	೧೪೬	೪	ಸ್ವಲ್ಪಿ	ಸ್ವಲ್ಪಿ
೨೯	೧೫	೨	ತಪ್ಪೆದಂ	ತಪ್ಪದಂ
೩೧	೨	೩	ಬಾಂಧವರ್ಗದ	ಬಾಂಧವ ವರ್ಗದ
೩೨	೬	೨	ಆಶೆಯನ್ನೆಲ್ಲವ	ಆಶೆಯನೆಲ್ಲವ
೩೨	೬	೪	ಭಾವದೊಳಿರುವವಂ	ಭಾವದೊಳಿರುವುದಂ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಮತ್ ಶಂಕರಾಚಾರ್ಯ ವಿರಚಿತ

ಸೌಂದರ್ಯ ಲಹರೀ

(ಕನ್ನಡ ಪದ್ಯಾನುವಾದ)

೧ ಲೋಕಮಾತೆಯೆಂ ಆದಿಶಕ್ತಿಯೆಂ ಶಿವನುಂ ನಿನ್ನನುಂ ಪಡೆಯಂತ
ಸಕಲ ಸಚರಾಚರವ ಸೃಜಿಸುವ ನಿನ್ನ ಕೃಪೆಯಂಲಿ ಬಲದಲಿ
ಶಕ್ತಿದೇವಿಯಂ ಬಲವು ಸಾನ್ನಿಧ್ಯಗಳುಂ ಇಲ್ಲದೆ ಇರುತಿರೆ
ಆತ್ತಲಿತ್ತಲುಂ ಹರನುಂ ಚಲಿಸನುಂ ಜಗವ ರಕ್ಷಿಸಲಾರನುಂ ॥೧॥

ಅಜನುಂ ಹರಿಹರ ಸ್ತೋತ್ರಗೈಯ್ಯುವ ಪರಮ ಮಂಹಿಮಳುಂ ನೀನಿಹೆ
ಏನುಂ ಸುಕೃತವ ಗೈಯ್ಯಲಾರದ ನಾನುಂ ಹೀನನುಂ ದೀನನುಂ
ಎಂತುಂ ನಿನ್ನಯ ಸ್ತೋತ್ರಗೈಯ್ಯಿವೆ ಮಂದ ಬುದ್ಧಿಯುಂ ನಾನಿಹೆ
ನಿನ್ನ ಹೊಗಳಲುಂ ಶಕ್ತಿ ಸಾಲದುಂ ಶಬ್ದ ಒಂದನುಂ ಅರಿಯೆನುಂ ॥೨॥

೨ ಸೃಷ್ಟಿಕರ್ತನುಂ ಬ್ರಹ್ಮದೇವನುಂ ನಿನ್ನ ಪಾದದ ಧೂಳಿಯಂ
ಶಿರದಿ ಧರಿಸುತ ಅದರ ಮಂಹಿಮೆಯಂ ಬಲದಿ ಜಗವನುಂ ಸೃಜಿಸುವ
ದೇವ ವಿಷ್ಣುವು ನಿನ್ನ ಪಾವನ ಚರಣ ಕಮಲದ ಧೂಳಿಯಂ
ತನ್ನ ಸಾವಿರ ಶಿರದಿ ಧರಿಸುವ ಪರಮ ಪೂಜ್ಯಳುಂ ನೀನಿಹೆ ॥೩॥

ಹರನುಂ ನಿನ್ನಯ ಚರಣಧೂಳಿಯಂ ವರವಿಭೂತಿಯಂ ತೆರದಲಿ
ತನ್ನ ದೇಹದಿ ಧರಿಸಿಕೊಳ್ಳುತ ಭಕ್ತಜನರನುಂ ಪೊರೆಯುವ
೩ ಮೂರ್ಖಿಜನಗಳ ಹೃದಯಂ ಕತ್ತಲೆ ಕಳೆವ ಸೂರ್ಯನುಂ ಇರುವುದುಂ
ಜಾಡ್ಯಕಳೆಯುಂತ ಹೊಚ್ಚ ಹೊಸಚೇತನವ ಶಕ್ತಿಯುನೀವುದುಂ ॥೪॥

ಬಡವನುಂಪ್ಯರಿಗಿದುವೆ ಚಿಂತಾಮಣಿಯುಂ ಚಿಂತೆಯಂ ಕಳೆವುದುಂ
ಭವದ ಸಾಗರದೊಳಗೆ ಮುಳುಗುತ ಕಷ್ಟಪಡುತಿಹ ನರರಿಗೆ
ಆ ವರಾಹದ ರೂಪ ತಾಳುತ ಜಗವ ಸಲುಹಿದ ವಿಷ್ಣುವ
ಕೋರೆದಾಡೆಯುಂ ಹಲ್ಲಿನಂತೆಯೆಂ ಸಕಲಕಷ್ಟವ ಕಳೆವುದುಂ ॥೫॥

Sri Vidyabharathi Book Centre, Sringeri

CC-O. In Public Domain. Digitized by eGangotri

೪ ಬೇರೆದೇವರು ತಮ್ಮ ಕರದಲಿ ಅಭಯ ವರಗಳ ತೋರ್ಪರು
ಅದ್ವಿತೀಯಳು ನೀನು ಒಬ್ಬಳು ಮಾತ್ರ ಪ್ರಕಟಿಸಲಿಲ್ಲವು
ನಮ್ಮ ದುಃಖವ ಕಳೆಯಲೋಸುಗ ಸಾಕು ನಿನ್ನಯ ಪಾದವು
ಭವದ ಕಷ್ಟವ ಕಳೆದು ಮುಕ್ತಿಯನಿತ್ತು ಪೊರೆವುದು ತಾಯಿಯೆ ॥೬॥

೫ ದೀನಜನಗಳ ಭಾಗ್ಯಲಕ್ಷ್ಮಿಯು ತೆರದಿ ಇರುತಿಹ ನಿನ್ನನು
ಹರಿಯು ಆರಾಧನೆಯ ಗೈಯ್ಯುತ ಸ್ತ್ರೀಯರೂಪವ ತಾಳುತ
ಅಚಲಚಿತ್ತನ ಹರನ ಮನವನು ಕೆಡಿಸಿ ಚಂಚಲಗೊಳಿಸಿದ
ನಿನ್ನ ಬಲದಲಿ ಮದನ ಮುನಿಗಳ ಮನವ ಮೋಹದಿ ಮುಳುಗಿಪ ॥೭॥

೬ ಹೇ ಹಿಮಾಲಯತನಯೆ ನಿನ್ನಯ ಕೃಪೆಯ ಬಲದಲಿ ಮನ್ಮಥ
ಪುಷ್ಪ ಬಾಣದಿ ದುಂಬಿ ಹೆದೆಯಲಿ ಐದುದ್ದ ಹೂಗಳ ಶರಗಳ
ಹೂಡಿ ಜಗ್ಗುತ ಮಧುವಸಂತನ ನೆರವಿನಿಂದಲಿ ಸರಸದಿ
ಮೂಲಯುಮಾರುತವೆಂಬ ರಥವನು ಏರಿ ಜಗವನು ಜಯಿಪನು ॥೮॥

೭ ಝಣರಝಣೆನ್ನುವ ಮಧುರನಾದದ ಕಾಂಚಿದಾಮವ ಧರಿಸುತ
ಗಜದ ಗಂಡಸ್ಥಳದ ಸದೃಶದ ಕುಂಭಕುಚಗಳ ಭಾರಕೆ
ನಸುವುಬಾಗಿದ ಚೆಲುವ ನಡುವಿನ ಶರದ ಚಂದ್ರನ ಕಾಂತಿಯು
ಹೊಳಿವ ಸುಂದರ ಚಂದ್ರವದನೆಯು ನಮ್ಮ ಎದುರಲಿ ಬೆಳಗಲಿ ॥೯॥

ಘೋರಭೀಕರ ತ್ರಿಪುರದೈತ್ಯನ ವಧೆಯಗೈಯ್ಯುವ ಸಮಯದಿ
ಬಹುಭಯಂಕರ ರೂಪತಾಳುತ ಆ ಮಹೇಶ್ವರನಂತೆಯೆ
ಬಿಲ್ಲು ಬಾಣವ ಪಾಶ ಅಂಕುಶ ಕರದಿ ಧರಿಸುತ ಭವ್ಯದಿ
ಅಟ್ಟಹಾಸದಿ ಮೆರೆದ ಸುಂದರ ತ್ರಿಪುರ ಸುಂದರಿ ಬೆಳಗಲಿ ॥೧೦॥

೮ ಅಮೃತಸಾಗರ ನಡುವೆ ಸುಂದರ ಕಲ್ಪತರುಗಳ ಮಧ್ಯದಿ
ಎಸೆವ ರತುನದ ದ್ವೀಪ ಮಧ್ಯದಿ ನೀಪ ವೃಕ್ಷದ ವನದಲಿ
ಚೆಲುವ ಚಿಂತಾಮಣಿಯ ಗೃಹದಲಿ ಶಿವನ ಶಕ್ತಿಯ ರೂಪದ
ರತ್ನತಲ್ಪದಿ ಪವಡಿಸಿರುವ ಸದಾಶಿವನ ಫಲಕೆ ಕರವರಿ ಧನ್ಯರು ॥೧೧॥

Vyasa Mathur Book Centre, Sringeri

CC-O. In Public Domain. Digitized by eGangotri

ಶ್ರೀಚಕ್ರವು



Sri Vidyabharathi Book Centre, Sringeri

CC-O. In Public Domain. Digitized by eGangotri



Sri Vidyabharathi Book Centre, Sringeri

CC-O. In Public Domain. Digitized by eGangotri

೯ ನೀನಂ ಮೂಲಾಧಾರ ಚಕ್ರದ ಪೃಥಿವಿತತ್ವವ ಭೇದಿಸಿ
ಎಸೆವ ಮಂಣಿಪುರ ಚಕ್ರದೊಳಗಿಹ ಜಲದ ತತ್ವವ ಭೇದಿಸಿ
ಮತ್ತಂ ಸ್ವಾಧಿಷ್ಠಾನ ಚಕ್ರದ ಅಗ್ನಿ ತತ್ವವ ಭೇದಿಸಿ
ವರ ಅನಾಹತ ಚಕ್ರದೊಳಗಿಹ ವಾಯುತತ್ವವ ಭೇದಿಸಿ ॥೧೨॥

ಆ ವಿಶುದ್ಧದ ಚಕ್ರದೊಳಗಿಹ ವ್ಯೋಮತತ್ವವ ಭೇದಿಸಿ
ಭ್ರೂ ಪ ಮಧ್ಯದ ಆಜ್ಞೆ ಚಕ್ರದ ಮನದ ತತ್ವವ ಭೇದಿಸಿ
ಎಳೆಯ ಸಾವಿರದಳದ ಸುಂದರ ಕಮಲಪುಷ್ಪದ ಮಧ್ಯದಿ
ಪತಿಯಸಹಿತದಿ ಸರಸದಿಂದಲಿ ನೀನಂ ವಿಹರಿಸುತಿರುತಿಹೆ ॥೧೩॥

೧೦ ತಾಯೆ ನಿನ್ನಯ ಚರಣಯುಗದಲಿ ಜನಿಸಿದಮೃತದ ಸ್ರೋತ್ರದಿ
ಮಿಂದಂ ದೇಹವನೆಲ್ಲ ನೆನೆಸುತ ಮುಂದೆಸಾಗುತ ಮುಂದದಲಿ
ಮನದ ಚಂದ್ರನ ಸೇರಿ ಮತ್ತೆಯು ತನ್ನ ಸ್ಥಾನಕೆ ಮರಳುತ
ಸರ್ಪತೆರದಲಿ ತೆಕ್ಕೆಹಾಕುತ ತನ್ನ ತನವನು ತೊರೆಯುತ ॥೧೪॥

ಆ ಸುಷುಮ್ನದ ನಾಡಿ ಕೆಳಗಡೆ ಇರುವ ಅನುಪಮ ಶಾಂತಿಯ
ದಿವ್ಯವರ ಆಧಾರ ಚಕ್ರದಿ ಲೀನಳಾಗುತ ಮಲಗುವೆ
೧೧ ವಿಶ್ವವಶಾತೆಯೆ ನೀನಂ ವಾಸಿಪ ದಿವ್ಯವರ ಶ್ರೀಚಕ್ರವು
ಪುಣ್ಯಪಾವನ ನಾಲ್ಕು ರುದ್ರರ ಭವ್ಯತೇಜದಿ ಎಸೆವುದಂ ॥೧೫॥

ಶಿವನಿಗಿಂತಲಂ ಭಿನ್ನರಾಗಿಹ ಐಯ್ದು ಶಕ್ತಿಗಳಿಂದಲಿ
ಮತ್ತೆ ಒಂಭತಂ ಮೂಲಪ್ರಕೃತಿಗಳಿಂದ ಎಂಟರ ದಳಗಳ
ಸರಸ ಷೋಡಶ ದಳದ ಶೋಭಿತ ಎರಡಂ ಕಮಲಗಳಿಂದಲಿ
ವರತ್ರಿಕೋಣದ ಸಹಿತ ಸಲ್ವತ್ತುನಾಲ್ಕು ಕೋಣದೊಳೆಸೆವುದಂ ॥೧೬॥

೧೨ ಆ ಹಿಮಶಾಲಯ ಗಿರಿಯಂತನಯಳೆ ಅಜನು ಕವಿವರ ಶ್ರೇಷ್ಠರು
ನಿನ್ನ ಅನುಪಮ ದಿವ್ಯ ಸೌಂದರ್ಯವನು ವರ್ಣಿಸಲರಿಯರು
ನೂರುಸಾವಿರ ವರುಷ ತಪಸಿಗೆ ಕಾಣಲಾರದ ಸೊಬಗನು
ಶಿವನು ಮಾತ್ರವೆ ಸವಿವ ನಿನ್ನಯ ದಿವ್ಯ ಸಿರಿಸೌಂದರ್ಯವ ॥೧೭॥

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಣಲೋಸುಗ ನಿನ್ನ ಚೆಲುವಿನ ಲೇಶಮಾತ್ರವು ಇಲ್ಲದ
ಸೊಗಸಲಾರದ ಅವುರಸ್ತ್ರೀಯರು ಅತುಳ ಕಾತುರದಿಂದಲಿ
ಶಿವನ ಸಾಯುಜ್ಯವನು ಪಡೆಯಲು ತವಕ ಪಡುವವರು ಸತತವು
ಇನ್ನು ಪಾಮರ ನರರು ಕಾಂಬುವರೆಂತು ನಿನ್ನಯ ಸೊಬಗನು ॥೧೮॥

೧೩ ಜನನಿ ನಿನ್ನಯ ವಾರಿನೋಟಕೆ ಪಾತ್ರನಾಗದ ಪುರುಷನು
ಬುದ್ಧಿಗೇಡಿಯು ಮುರ್ಖನಾದರು ಅತಿಕುರೂಪಿಯು ಆದರು
ಯುವತಿ ವೃಂದವು ಕುಚದ ಮೇಲಿನ ವಸನ ಕಳಚುತ ಬಿದ್ದರೂ
ಕಾಂಚಿ ದಾಮವು ಸಡಲಿ ಬಿದ್ದರು ಮೋಹಗೊಳ್ವರು ಅವನಲಿ ೧೯॥

೧೪ ದೇವಿ ನಿನ್ನಯ ಚರಣಕಮಲದ ಐವತ್ತಾರರ ಅನುಪಮ
ಭೂತತತ್ವದ ಕಿರಣ ನಿಕರವು ಐವತ್ತೆರಡರ ದಿವ್ಯದ
ಆಪ ತತ್ವದ ಮುತ್ತೆ ಐವತ್ತೆರಡು ಅಗ್ನಿಯ ತತ್ವದ
ಮುತ್ತೆ ಐವತ್ತು ಮೇಲೆ ನಾಲ್ಕರ ವಾಯುತತ್ವದ ಮೇಲಕೆ ॥೨೦॥

ಹೊಳೆವ ಎಪ್ಪತ್ತೆರಡು ಭವ್ಯದ ವ್ಯೋಮ ತತ್ವದ ಮೇಲಕೆ
ಭೂವ ಮುಧ್ಯದ ಹತ್ತು ಅರರ ಮುತ್ತ ಮೇಲಕೆ ನಾಲ್ಕರ
ಮನದ ತತ್ವದ ಕಿರಣಲಹರಿಯ ಮೇಲೆ ಬೆಳಗುತಲಿರುವುದಂ
ಇಂತು ಹೊಳೆಯುವ ನಿನ್ನ ಸೌಂದರ್ಯವನು ವರ್ಣಿಸಲರಿಯೆನು ॥೨೧॥

೧೫ ಶರದ ಚಂದ್ರನ ತೆರದಿ ಹೊಳೆಯುತ ಚೆಲುವ ಕೇಶಕಲಾಪದಿ
ದಿವ್ಯ ಚಂದ್ರನ ಧರಿಸಿ ಕರುಣದಿ ವರಪ್ರದಾನವ ಮಾಡುತ
ಅಭಯ ನೀಡುತ ಸ್ಫಟಿಕಮಾಲೆಯ ಗ್ರಂಥ ಕರದಲಿ ಪಿಡಿದಿಹ
ನಿನ್ನ ಚರಣಕೆ ಒಮ್ಮೆ ಸಾಷ್ಟಾಂಗವನು ಗೈಯುತ ನವಿಸಲು ॥೨೨॥

ಹಾಲು ದ್ರಾಕ್ಷೆಯು ಸವಿಯು ಮೀರಿದ ಮಧುರ ವಾತಿನ ಜಾಣ್ಮೆಯು
ಪಡೆದ ಮಹಿಮರ ದಿವ್ಯ ಸಾನ್ನಿಧ್ಯವನು ಈಯುವ ಒಲವಲಿ
ಮನದ ಕತ್ತಲು ಹೃದಯ ದೌರ್ಬಲ್ಯವನು ಕಳೆಯುತ ಸೊಗಸಲಿ
ಹೊಚ್ಚ ಹೊಸಬೆಳಕಾಗಿ ನಿರುತ ಕಾಂತಲ ಬಿದ್ದರುನೀಯುವೆ ॥೨೩॥

CC-O. In Public Domain. Digitized by eGangotri

CC-O. In Public Domain. Digitized by eGangotri

೧೬ ಲೋಕವಶ್ಯತೆಯೆಂ ಬಾಲಸೂರ್ಯನ ಲಲಿತಕೋಮಲ ಕಿರಣವು
ಕಮಲವನವನುಂ ಅವಂಳತೇಜದಿ ಹೊಳೆವ ತೆರದಲಿ ಅರಳಿಪ
ಪರಿಯೆಂ ಕವಿಗಳ ಮನವ ವಿಕಸಿಸಿ ಅರುಣಕಿರಣದಿ ಬೆಳಗುವ
ಪುಣ್ಯಪಾವನ ನಿನ್ನ ಭಜಿಸುವ ಭಾಗ್ಯವಂತರು ಶ್ರೇಷ್ಠರಂ ॥೨೪॥

ಶಾರದಾಂಬೆಯ ಪೂರ್ಣಕೃಪೆಯುನುಂ ಪಡೆದುಂ ಧನ್ಯರುಂ ಆಗುಂತ
ಅಮೃತ ಸೇಚನದಂತೆ ಸುಮಧುರ ಅತುಳ ಸುಂದರವಾಗಿಹ
ಮನಕೆ ಆನಂದವನುಂ ಈಯುಂವ ಲಲಿತ ಪದಗಳ ಸೊಬಗಲಿ
ಜಗವ ರಂಜಿಸುತಿಹರುಂ ಮುಂದದಲಿ ಹರ್ಷ ಕಡಲಲಿ ತೇಲಿಸಿ ॥೨೫॥

೧೭ ಚಂದ್ರಕಾಂತದ ಶಿಲೆಯು ಕಾಂತಿಯುಂ ದಿವ್ಯ ವಶಿನಿಯುಂ ಸಹಿತದ
ಶಕ್ತಿನಿಕರದೊಳಿಸೆವ ನಿನ್ನನುಂ ಭಜಿಪ ಪಾವನ ಪುರುಷರುಂ
ಶ್ರೇಷ್ಠ ಕವಿಗಳ ತೆರದಿ ರಚನಾ ಶಕ್ತಿಯದ್ಭುತದಿಂದಲಿ
ಪರಮಶಾರದೆ ಒರೆದ ಕಾವ್ಯದ ತೆರದಿ ಕಾವ್ಯವ ರಚಿಪರುಂ ॥೨೬॥

೧೮ ಸ್ವರ್ಗಮೃತ್ಯುವು ಲೋಕವೆರಡನುಂ ನಿನ್ನ ದೇಹದ ಕಾಂತಿಯು
ಕೆಂಪುವರ್ಣದಿ ಎಸೆವ ತೆರದಲಿ ಆವ ಮಾಳ್ಪನೊ ಭಜಿಪನೊ
ಅವನ ರೂಪಕೆ ಚಕಿತವಾಗಿಹ ವನದ ಹರಿಣದ ನಯನದ
ಅವುರವಧೂಗಳುಂ ಮೋಹಗೊಳ್ಳುತ ವಶವು ಆಗುವರವನಿಗೆ ॥೨೭॥

೧೯ ಶಿವನ ರಾಣಿಯೆಂ ನಿನ್ನ ಮುಖವನುಂ ಬಿಂದುರೂಪವ ಮಾಡುಂತ
ಅದರ ತಲದಲಿ ಎರಡು ಸ್ತನಗಳ ರಚಿಸಿ ಮುತ್ತೈಯುಂ ಕೆಳಗಡೆ
ಆ ತ್ರಿಕೋಣವ ರಚಿಸಿ ನಿನ್ನಯ ಕಾಮಕಳೆಯಾ ಬೀಜವ
ಧ್ಯಾನಮಾಡುಂವ ಭಾಗ್ಯವಂತನು ಜಗದ ಸ್ತ್ರೀಯರ ಮನವನುಂ ॥೨೮॥

ಮೋಹಗೊಳಿಪನುಂ ಎಂದುಂ ಪೇಳ್ವುದುಂ ದೊಡ್ಡ ವಿಷಯವು ಅಲ್ಲವು
ಸೂರ್ಯ–ಚಂದ್ರರ ತನ್ನ ಕಾಚಗಳ ಮಾಡಿಕೊಂಡಿಹ ಸಕಲವ
ಮೂರುಂ ಲೋಕವ ಭ್ರಾಂತಿಗೊಳಿಪನುಂ ತನ್ನ ತೇಜದ ಬಲದಲಿ
ಕೋಟಿ ಸೂರ್ಯರ ಕಿರಣ ತೆರದಲಿ ಸಕಲ ವಿಶ್ವವ ಬೆಳಗುವ ॥೨೯॥

Sri Vidyabharathi Book Centre, Sringeri

CC-O. In Public Domain. Digitized by eGangotri

೨೦ ಚಂದ್ರಕಿರಣವು ಸ್ಪರ್ಶವಾಗಲು ಶೀತಲೋದಕ ಸುರಿಸುವ
ಚಂದ್ರಕಾಂತದ ಶಿಲೆಯು ಪುತ್ಥಳಿಯಂತೆ ಇರುತಿಹ ನಿನ್ನನು
ಆರು ನಿನ್ನನು ಮನದಿ ನೆನೆಯುತ ನಿನ್ನ ದರ್ಶನ ಪಡೆವರೊ
ವೈನತೇಯನ ಕಂಡ ಹಾವಿನ ಹೆಡೆಯು ಕುಗ್ಗುವ ತೆರದಲಿ ॥೩೦॥

ದುಃಖಿಪೂರಿತ ಭವದ ವಿಷವದು ನಾಶಗೊಳ್ವುದು ಭರದಲಿ
ಅಮೃತ ನಾಡಿಯು ತೆರದಿ ಹೃದಯಕೆ ಮನಕೆ ಸಂತಸವೀಯುವ
ನಿನ್ನ ನೋಟವನೊಮ್ಮೆ ಬೀರಲು ಭವದ ಜ್ವರದಲಿ ನರಳುವ
ನರರು ರೋಗವು ಕಳೆದು ಮಂದದಲಿ ನಿನ್ನ ಕೃಪೆಯಲಿ ನಲಿಪರು ॥೩೧॥

೨೧ ದೇಹದೊಳಗಿಹ ಆರು ಚಕ್ರದ ಮೇಲೆ ಸೊಗಯಿಪ ಸುಂದರ
ವರಸಹಸ್ರಾರೆಂಬ ಕಮಲದಿ ಸೂರ್ಯ–ಚಂದ್ರರ ಅಗ್ನಿಯ
ರೂಪ ತಳೆಯುತ ಮಿಂಚಿನಂತೆಯೆ ಹೊಳೆವ ನಿನ್ನಯ ಕಲೆಯನು
ಆರು ರಿಪುವರ್ಗಗಳ ಕಲ್ಮಶ ಮೆಟ್ಟಿ ನಾಶವ ಗೊಳಿಸುತ ॥೩೨॥

ಶುದ್ಧ ಚಿತ್ತದಿ ನಿನ್ನ ಸಾಕ್ಷಾತ್ಕಾರ ಪಡೆಯುವ ಮಹಿಮರು
ಪರಮ ಆನಂದವನು ಪಡೆವರು ದುಃಖ ಕಳವಳ ಕಳೆಯುತ
ಹೇ ಭವಾನಿಯೆ ನಿನ್ನ ದಾಸನ ಮೇಲೆ ಕರುಣೆಯ ತೋರ್ಪುದು
ಲೋಕ ಜನನಿಯೆ ಎಂದು ಮಾತ್ರವೆ ನಿನ್ನ ಸ್ತುತಿಸುತಲಿರುತಿರೆ ॥೩೩॥

೨೨ ವರ ಮುಕುಂದಗೆ ಬ್ರಹ್ಮದೇವಗೆ ಇಂದ್ರ ಸುರರಿಗೆ ದೊರೆಯದ
ದಿವ್ಯ ಸಾಯುಜ್ಯವನು ಈಯುವೆ ಕರುಣೆಯಿಂದಲಿ ಹರಸುತ
ಹೇ ಭವಾನಿಯೆ ಎಂದು ಮಾತ್ರವು ನಿನ್ನ ಸ್ತುತಿಸುತಲಿರುತಿರೆ
ಮರಳಿ ಜನ್ಮವ ಪಡೆಯಲಾರದ ದಿವ್ಯ ಮುಕ್ತಿಯನೀಯುವೆ ॥೩೪॥

೨೩ ತಾಯೆ ನಿನ್ನಯ ಉದರ ಕಾಂತಿಯು ಕೆಂಪುವರ್ಣದಿ ಶೋಭಿಸಿ
ಮೂರುನಯನದಿ ಸ್ನನದ ಭಾರಕೆ ಬಾಗಿ ಹೊಳೆಯುವ ಚಂದ್ರನ
ವರಕಿರೀಟದ ಅಗ್ರ ಭಾಗದಿ ಧರಿಸಿತಿರುವುದ ಕಂಡರೆ
ಮನ್ನ ಪಡೆಯುವ ಮನದಿ ಹರುಷವು ಎಲ್ಲೆ ಮೀರಿ ವ್ಯಾಪಿಸಿ ॥೩೫॥
Sharada Peeth Research Centre, Sringeri

CC-O. In Public Domain. Digitized by eGangotri

ತೃಪ್ತಳಾಗದೆ ಹರನ ತನುವಿನ ಸರ್ವಭಾಗವ ವ್ಯಾಪಿಸಿ
ಹರನು ಮತ್ತೆಯು ನಿನ್ನೊಳಾವುದು ಭೇದವಿಲ್ಲದೆ ಕಾಣುವೆ
ದೇವ ದೇವನ ಶಿವನ ಸಾನ್ನಿಧ್ಯವನು ಪಡೆಯುತ ಸೊಗಸುತ
ಅಮಳ ತೇಜದಿ ಹೊಳೆಯುತಿರುತಿಹ ಪರಮ ಮಂಹಿಮಳು
ನೀನಿಹೆ ॥೩೬॥

೨೪ ತಾಯೆ, ಬ್ರಹ್ಮನು ಸಕಲಸಚರಾಚರದ ಸೃಷ್ಟಿಯ ಸೃಜಿಪನು
ವಿಷ್ಣು ರಕ್ಷಿಪ ಒಲವಿನಿಂದಲಿ ರುದ್ರ ನಾಶವಗೈವನು
ವರತ್ರಿಮೂರ್ತಿಯು ಲಯುವಗೊಳಿಪನು ಹರನು ತನ್ನಯ ದೇಹದಿ
ಮತ್ತೆ ನಿನ್ನಯ ಕರುಣೆಯಿಂದಲಿ ಆ ತ್ರಿಮೂರ್ತಿಯ ಬದುಕಿಪ ॥೩೭॥

೨೫ ತಾಯೆ, ನಿನ್ನಯ ತ್ರಿಗುಣದಿಂದಲಿ ಜನ್ಮತಾಳಿದ ಪಾವನ
ಆ ತ್ರಿಮೂರ್ತಿಗಳೊಲವಿನಿಂದಲಿ ನಿನ್ನ ಪಾದದ ಪೀಠದ
ಬಳಿಯೆ ಕೂಡ್ರುತ ವಿಧದ ಪರಿಯಲಿ ನಿನ್ಯ ಸ್ತುತಿಸುತಲಿರುವರು
ನಿನ್ನ ಪೂಜೆಯಗೈಯ್ಯಲವರನು ಪೂಜೆಗೈದಂತಾದುದು ॥೩೮॥

೨೬ ಜನನಿ, ಪ್ರಳಯದಿ ಬ್ರಹ್ಮದೇವನು ವಶಾಯುವಾಗುವ ಕಾಣನು
ಹರಿಯು ವಿಶ್ರಾಂತಿಯನು ಕೊಳ್ವನು ಯಮನು ನಾಶವ
ಹೊಂದುವ
ವರಕುಬೇರನು ಅಳಿವ ಇಂದ್ರಾದಿಗಳು ಪ್ರಾಣವ ತೊರೆವರು
ನಿನ್ನ ಗಂಡನು ಶಿವನು ವಶಾತ್ರವು ಲೀಲೆಯಿಂದಲಿ ವಿಹರಿಪ ॥೩೯॥

೨೭ ವಿಶ್ವವಶಾತೆಯೆ ನಾನು ನುಡಿಯುವ ನುಡಿಗಳೆಲ್ಲವು ನಿನ್ನನು
ಭಕ್ತಿಯಿಂದಲಿ ಒಲಿದು ಭಜಿಸುವ ದಿವ್ಯ ಮಂತ್ರಗಳಾಗಲಿ
ನಾನು ಮಾಡುವ ಅಂಗಚೇಷ್ಟೆಯು ನಿನ್ನ ಮುದ್ರೆಯು ಆಗಲಿ
ನಾನು ನಡೆಯುವ ನಡಿಗೆ ನಿನ್ನಯ ಪರಪ್ರದಕ್ಷಣೆಯಾಗಲಿ ॥೪೦॥

ನಾನು ವಶಾಡುವ ಊಟ ನಿನ್ನಯ ಹವಿಸು ಆಗಲಿ ತಾಯಿಯೆ
ನೆಲದಿ ಹೊರಳುವದೊಲಿದು ಮಾಡುವ ಎನ್ನ ಶಿರಸಾಷ್ಟಾಂಗವು
ಐಯ್ದು ಇಂದ್ರಿಯ ಚೇಷ್ಟೆಯಿಂದಲಿ ನಾನು ಗೈಯುವ
ಕ್ರಿಯೆಗಳು
ಶಿವನಿಗರ್ಪಿತವಾಗಲಿ ತಾಯೆ ಭಕ್ತಿಯಿಂದಲಿ ಆಗಲಿ ॥೪೧॥

CC-O. Vasishtha Ganapathi Sthapathyam Collection, Sringeri

CC-O. In Public Domain. Digitized by eGangotri

೨೮ ಬ್ರಹ್ಮದೇವನು ಅಶ್ವಮೇಧದ ಯಾಗ ವಿಪುಳವ ಗೈದಿಹ
ಇಂದ್ರದಿವಿಜರು ಅಮೃತಕುಡಿದರು ಕಷ್ಟಪಡುವರು ನರಳುತ
ಕಾಳಕೂಟದ ವಿಷವ ನುಂಗಿದ ಅದ್ವಿತೀಯಂಗೆ ಪರವಂಗೆ
ಶಿವಗೆ ಮಾತ್ರವು ಮರಣವಿಲ್ಲವು ನಿನ್ನ ಓಲೆಯು ಬಲದಲಿ ॥೪೨॥

೨೯ ಬ್ರಹ್ಮ ವಿಷ್ಣು ಮಹೇಂದ್ರ ಬರುತಲಿ ನಿನಗೆ ನವಿಸುತಲಿರುತಿರೆ
ಹರನು ಬಂದನು ಎಂದು ತಿಳಿಯುತ ಎದುರುಗೊಳ್ಳಲು ಹೋಗಲು
ನಿನ್ನ ಪರಿಜನ ನೋಡಿ ಬ್ರಹ್ಮನ ವರಕಿರೀಟವು ಕಾಂಬುದು
ಅತುಳ ಎಚ್ಚರಿಕೆಯಲಿ ನಡೆವುದು ಎಂದು ನುಡಿವರು ಚಕಿತದಿ ॥೪೩॥

ಮತ್ತೆ ಕೈಟಭ ದೈತ್ಯರಿಪುವನು ಕೊಂದ ವಿಷ್ಣುವ ದೇವನ
ವರಕಿರೀಟವು ಹೊಳೆಯುತಿರುವುದು ಅಲ್ಲಿ ಜಾರುತ ಬಿದ್ದಿಯೆ
ಮತ್ತೆ ಸ್ವರ್ಗದ ಇಂದ್ರದೇವನ ವರಕಿರೀಟವು ತೋರ್ಪುದು
ಅದನು ದಾಂಟುತ ಮುಂದೆಹೋಗುವದೆಂದು ಪರಿಜನ
ನುಡಿವರು ॥೪೪॥

೩೦ ಆದಿ ಅಂತ್ಯದ ರಹಿತಮಹಿಮಳೆ ಲೋಕಪೂಜ್ಯಳೆ ವಂದ್ಯಳೆ
ನಿನ್ನ ದೇಹದ ಕಾಂತಿಯಿಂದಲಿ ಮತ್ತೆ ಆ ಅಣಿಮಾದಿಯ
ದಿವ್ಯ ತೇಜದಿ ಬೆಳಗುತಿರುತಿಹ ಪರಮ ಮಹಿಮಳ ನಿನ್ನನು
ಏಕಚಿತ್ತದಿ ಒಲಿದು ಸೇವಿಪೆ ನಿತ್ಯ ಭಕ್ತಿಯ ಭಾವದಿ ॥೪೫॥

ಇಂತು ಈಪರಿ ಆರು ನಿನ್ನನು ಬಿಡದೆ ಧ್ಯಾನವಗೈವರೊ
ಅವನು ಪರಮೇಶ್ವರನ ಐಶ್ವರ್ಯವನು ಹುಲ್ಲಿನಕಿಂತಲು
ಕೀಳು ಎನ್ನುತ ಬಗೆದು ತೊರೆವನು ಆ ವಿರಾಗಿಗೆ ಮಹಿಮಗೆ
ಪ್ರಳಯದಗ್ನಿಯ ದಿವ್ಯ ನೀರಾಂಜನದ ದೀಪವು ನೀನಿಹೆ ॥೪೬॥

೩೧ ವಿವಿಧ ಪರಿಯಲಿ ಪೂಜೆಗೈಯ್ಯುವ ಭಕುತ ಜನಗಳ ಬಯಕೆಯ
ಸಲಿಸಲೋಸುಗ ಹತ್ತು ಆರರ ಮತ್ತೆ ಮೇಲಕೆ ನಾಲ್ಕರ
ತಂತ್ರವಿದ್ದವು ಚಂದ್ರಮೌಳಿಯು ನೀನು ಹೇಳಿದ ತೆರದಲಿ
ಸಕಲ ಸಿದ್ಧಾಂತಗಳ ಸಾರವ ರಚಿಸಿ ಲೋಕಕೆ ತಿಳುಹಿದ ॥೪೭॥

Sri Vidyabharathi Book Centre, Sringeri

CC-O. In Public Domain. Digitized by eGangotri

೩೨ ಶಿವನುಂ ಶಕ್ತಿಯುಂ ಕಾಮಂ ಕ್ಷಿತಿರಥ ರವಿಯುಂ ಚಂದ್ರನುಂ ಹಂಸವು
ಸ್ಮರನುಂ ಶಕ್ರನುಂ ಮತ್ತೆ ಆ ಪರಮಹರಹರಗಳ ಪದಗಳ
ಕೊನೆಗೆ ವರ 'ಹ್ರೀಂ' ಎಂಬ ಅದ್ಭುತ ದಿವ್ಯ ಮಂತ್ರವ ಸೇರಿಸೆ
ಪುಣ್ಯ ದೇವಿಯೆ ನಿನ್ನ ಭಜಿಸುವ ದಿವ್ಯ ಮಂತ್ರವು ಎನಿಪುದುಂ ॥೪೮॥

೩೩ ಸಮಯ ಆಚಾರಗಳ ಅರಿಯುಂತ ನಿನ್ನ ಅನುಭವ ಸವಿಯನುಂ
ಸವಿವ ಮಹಿಮರುಂ ನಿನ್ನ ಮಂತ್ರಕೆ– ಕಾಮರಾಜದ ಮಂತ್ರೆಯುಂ
ಶ್ರೀಯಂ ಭುವನೇಶ್ವರಿಯುಂ ಬೀಜದ ಸಹಿತ ಇಷ್ಟವ ನೀಡುವ
ಪುಣ್ಯ ರುದ್ರಾಕ್ಷಿಗಳ ಮಾಲೆಯುಂ ಮಾಡಿ ಮಂತ್ರವ ಜಪಿಸುತ ॥೪೯॥

ವರತ್ರಿಕೋಣದ ನಿಲಯವೆನಿಸಿದ ದಿವ್ಯ ಬೈಂಧವ ಸ್ಥಾನದಿ
ಪುಣ್ಯ ಸ್ವಾಧಿಷ್ಠಾನ ಅಗ್ನಿಯುಂ ಅಲ್ಲಿ ಸ್ಥಾಪಿಸಿ ಹೊತ್ತಿಸಿ
ಧಾರೆ ಧಾರೆಯುಂ ಸುರಭಿ ಘೃತವನುಂ ಸುರಿದುಂ ಸೇವೆಯುಂ ಮಾಳ್ಪರುಂ
ಇಂತುಂ ನಿನ್ನನುಂ ಭಜಿಪ ಭಕ್ತರುಂ ಭಾಗ್ಯವಂತರುಂ ಧನ್ಯರುಂ ॥೫೦॥

೩೪ ತಾಯೆ ಭಗವತಿ ಸೂರ್ಯ ಚಂದ್ರರ ಸ್ತನಗಳಂತೆಯೆ ಧರಿಸಿಹ
ನೀನುಂ ವರ ಆನಂದ ಭೈರವನಂತೆ ರೂಪದಿ ಕಾಂಬುವೆ
ಮಂತ್ರೆ ವರ ಆನಂದ ಭೈರವ ನಿನ್ನ ಪರಿಯಲಿ ಕಾಂಬುವ
ಶೇಷ ಶೇಷೀರೂಪ ನಿಮ್ಮಿಬ್ಬರಿಗೆ ಸರಿಸಮು ತೋರ್ಪುದುಂ ॥೫೧॥

ನೀನುಂ ಪರಮಾನಂದ ಭೈರವಿ ನಿನಗೆ ಮಹಿಮನುಂ ಪರಮನುಂ
ದಿವ್ಯ ಆನಂದ ಭೈರವ ನಿನಗೆ ಆಶ್ರಯುಂ ನೀನುಂ ಅವನಿಗೆ ಆಶ್ರಯುಂ
ನೀವು ಈರ್ವರುಂ ಸರಿಸಮಾನರುಂ ಒಬ್ಬರೊಬ್ಬರ ಹೊಂದುತ
ಒಂದೆ ರೂಪದ ಪರಿಯೆ ಹೊಳೆಯುಂತ ಕಾಣುತಿರುವಿರಿ ಪ್ರಭೆಯಲಿ ॥೫೨॥

೩೫ ಜನನಿ, ಶಿವಸತಿ, ನೀನುಂ ಪಾವನ ಹೊಳೆವ ಆಜ್ಞಾ ಚಕ್ರವ
ಮನದಿ ಸ್ವಾಧಿಷ್ಠಾನ ಗೈದಿಹ ಮನಸ ತತ್ವವು ನೀನಿಹೆ
ಆ ವಿಶುದ್ಧದ ಚಕ್ರದೊಳಗಿಹ ವ್ಯೋಮ ತತ್ವವು ನೀನಿಹೆ
ಆ ಅನಾಹತ ಚಕ್ರದೊಳಗಿಹ ವಾಯುಂತತ್ವವು ನೀನಿಹೆ ॥೫೩॥

Sri Vidyabharathi Book Centre, Sringeri

CC-O. In Public Domain. Digitized by eGangotri

ಮತ್ತೆ ಸ್ವಾಧಿಷ್ಠಾನ ಚಕ್ರದ ಅಗ್ನಿ ತತ್ವವು ನೀನಿಹೆ
ದಿವ್ಯ ಮಣಿಪುರ ಚಕ್ರದೊಳಗಿಹ ಜಲದ ತತ್ವವು ನೀನಿಹೆ
ಭವ್ಯ ಮೂಲಾಧಾರ ಚಕ್ರದ ಪೃಥಿವಿ ತತ್ವವು ನೀನಿಹೆ
ಜಗವ ಸೃಷ್ಟಿಪ ಸಮಯ ನೀ ಶಿವಯುವತಿಯಂತೆಯೆ ಕಾಂಬುವಿ ॥೫೪॥

೫೬ ಏಕ ಚಿತ್ತದಿ ನಿನ್ನ ಪತಿಯನು ಸೇವೆ ಗೈಯ್ಕದ ಭಾಗ್ಯನು
ಸೂರ್ಯ ಚಂದ್ರರು ಅಗ್ನಿ ಕಾಣದ ದಿವ್ಯ ಲೋಕವ ಪಡೆವನು
ಕೋಟಿ ಸೂರ್ಯರ ಪ್ರಭೆಯ ನಾಚಿಪ ದಿವ್ಯ ತೇಜದ ಜ್ಞಾನದ
ನಿನ್ನ ಆಜ್ಞಾಚಕ್ರದೊಳಗಿಹ ಪರಮ ಶಿವನನು ನಮಿಪೆನು ॥೫೫॥

೫೭ ನಿನ್ನ ದಿವ್ಯ ವಿಶುದ್ಧ ಚಕ್ರದ ಮಧ್ಯೆ ವಿಮಲದಿ ಹೊಳೆಯುವ
ಶುದ್ಧಸ್ಫಟಿಕದ ಮಣಿಯ ತೆರದಲಿ ಎಸೆವ ವ್ಯೋಮದ ತತ್ವವ
ಜನಿಸುವಂಥಹ ಪುಣ್ಯಪಾವನ ಶಿವನ ತತ್ವವು ಇರುವದಂ
ಶಿವನ ತತ್ವವ ದೇವಿ ತತ್ವವ ಭಕ್ತಿಯಿಂದಲಿ ಸೇವಿಪೆ ॥೫೬॥

ಇಲ್ಲಿ ಹೊಳೆಯುವ ಶಿವನ ತೇಜವು ಮತ್ತೆ ದೇವಿಯ ಕಾಂತಿಯು
ಪೂರ್ಣ ಚಂದ್ರನ ಕಾಂತಿ ಹೀಯಡಾಳಿಸುತ ಸುಖವನು ಕೊಡುವವು
ಜಗವು ಪ್ರಭೆಯಲಿ ವಿಂದು ಅಜ್ಞಾನಾಂಧಕಾರವ ನೀಗುತ
ಮನದ ದುಗುಡವು ಕಳೆದ ಪಕ್ಷಿ ಚಕೋರದಂತೆಯೆ ಹೊಳೆವುದು ॥೫೭॥

೫೮ ವಿಶ್ವವಗಾತೆಯೆ ನಿನ್ನ ನುಡಿಯಲಿ ಹತ್ತು ಮೇಲಕೆ ಎಂಟರ
ವಿದ್ಯ ಸೃಜಿಸುತ ಹಂಸ ಮತ್ತೆಯು ಕ್ಷೀರ ನ್ಯಾಯದ ತೆರದಲಿ
ದೋಷ ತ್ಯಜಿಸುತ ಗುಣವ ಗ್ರಹಿಸುತ ಅಲರ್ದ ಕಮಲದ ತೆರದಲಿ
ಹೊಳೆವ ಜ್ಞಾನದ ಕಮಲವೆನಿಸುವ ಆ ಅನಾಹತ ಪದ್ಮದಿ ॥೫೮॥

ಮಧುರ ಮಕರಂದವನು ಸವಿಯುತ ಮೈಯ್ಕ ಮರೆತಿಹ
ಯೋಗಿಯ
ಹೃದಯ ಮಾನಸ ವರಸರೋವರದೊಳಗೆ ವಾಸವ ಮಾಡುವ
ದಿವ್ಯ ಅನುಪಮ ಮಹಿಮೆಯಿಂದಲಿ ಎಸೆವ ಶಿವನನು ಮತ್ತೆಯು
ಶಕ್ತಿ ದೇವಿಯ ನಾನು ಭಜಿಪೆನು ಏಕ ಚಿತ್ತದಿ ಸತತವು ॥೫೯॥

Sri Vidyabharathi Book Centre, Sringeri

CC-O. In Public Domain. Digitized by eGangotri

೩೯ ಜನನಿ ನಿನ್ನಯ ದಿವ್ಯ ಸ್ವಾಧಿಷ್ಠಾನ ಚಕ್ರದಿ ನಿರತವು
ಪ್ರಳಯ ಸೃಜಿಸುವ ಅಗ್ನಿ ದೇವನ ಏಕ ಭಾವದಿ ಭಜಿಪೆನು
ಆಲ್ಲಿ ವಾಸಿಪ ಚಂದ್ರ ಕಳೆಯನು ಒಲವಿನಿಂದಲಿ ಪೊಗಳುವೆ
ಮೂರು ಲೋಕವ ಸುಡುವ ಸಮಯದಿ ನೀನು ಕರುಣದಿ ರಕ್ಷಿಪೆ ॥೬೦॥

೪೦ ಘೋರ ವಜ್ರಪುರ ಚಕ್ರದೊಳಗಿಹ ಆಜ್ಞಾನ ತಿಮಿರವ ನಶಿಸುವ
ಭಾರಿ ವಿದ್ಯುತ್ ಶಕ್ತಿ ಸಹಿತದಿ ವಿವಿಧ ರತ್ನದ ಪ್ರಭೆಯಲಿ
ಹಲವು ವರ್ಣದ ಇಂದ್ರಚಾಪದ ಸೊಬಗಿನಿಂದಲಿ ಹೊಳೆಯುವ
ಶಿವನ ಪ್ರಳಯಾಗ್ನಿಯಲಿ ಸುಡುತಿಹ ಜಗದ ತಾಪವ
ಕಳೆಯಲು ॥೬೧॥

ಆನೆ ಸೊಂಡಿಲಿನಂತೆ ಧಾರಾಕಾರ ವೃಷ್ಟಿಯು ಸುರಿಸುವ
ಕಪ್ಪುವರ್ಣದ ಪ್ರಳಯ ಮೇಘದ ಪರಿಯೊಳಿರುತಿಹ ಮಹಿಮಳ
ನಿನ್ನ ಸತತವು ಏಕಚಿತ್ತದಿ ಭಕ್ತಿಯಿಂದಲಿ ಭಜಿಪೆನು
ವಿಶ್ವ ಜನನಿಯೆ ನಿನ್ನ ಮಹಿಮೆಯ ಆರು ಬಣ್ಣಿಸಬಲ್ಲರು ॥೬೨॥

೪೧ ನೀನು ಮೂಲಾಧಾರ ಚಕ್ರದಿ ಲಾಸ್ಯವಾಡುವ ಸಮಯದಿ
ನಿನ್ನ ಜೊತೆಯಲಿ ಭವ್ಯ ನವರಸಪೂರ್ಣ ತಾಂಡವ ನಾಟ್ಯವ
ಮಾಡಲಾಶಿಸಿ ಅತಿಳ ಉತ್ಸಾಹದಲಿ ಮುಂದದಲಿ ನಲಿಯುವ
ಭವ್ಯ ತಾಂಡವ ಪ್ರಿಯನ ಶಿವನನು ಸತತ ಭಜಿಸುವೆ ಒಲವಲಿ ॥೬೩॥

ನೀವು ಈರ್ವರು ಜಗವ ಸೃಜಿಸಲು ಕರುಣೆಯಿಂದಲಿ ಇಚ್ಛಿಸಿ
ಜಗವ ಸೃಜಿಸುತ ಜಗದ ಜನನಿಯು ಲೋಕ ಜನಕನು ಆಗುತ
ಲೋಕವೆಲ್ಲವ ಪೊರೆಯುತಿರುವಿರಿ ಒಲವಿನಮೃತವ ಸುರಿಸುತ
ವಿಶ್ವಮಾತೆಯೆ ಲೋಕತಂದೆಯೆ ನಿಮ್ಮ ಭಜಿಪೆನು ಸತತವು ॥೬೪॥

೪೨ ಪುಣ್ಯಪರ್ವತ ರಾಜಕುವರಿಯೆ, ಹತ್ತು ಮೇಲಕೆ ಎರಡರ
ಸೂರ್ಯ ಮಣಿಗಳ ದಿವ್ಯಕಾಂತಿಯ ನಿನ್ನ ಮುಕುಟವ ನೆನೆಯುವ
ಭಾಗ್ಯವಂತನು ರತ್ನ ಪ್ರಭೆಯಲಿ ಹೊಳೆವ ಮುಕುಟದ ಅಗ್ರದಿ
ಚಂದ್ರ ಕಳೆಯನ್ನು ಕಂಡು ಕಾಮನ ಬಿಲ್ಲು ಎನ್ನುತ ಭಾವಿಪ ॥೬೫॥

Sri Vidyabharathi Book Centre, Sringeri

CC-O. In Public Domain. Digitized by eGangotri

೪೩ ದೇವಿ ಅರಳಿದ ಕರಿಯಂ ಕವಂಲದ ದಿವ್ಯ ಕಾಂತಿಯಂ ಸೊಬಗಿನ
ನೀಳವಾಗಿಹ ದಟ್ಟವಾಗಿಹ ನಿನ್ನ ಕೇಶದ ತುರಬುದಂ
ಎಮ್ಮ ಅಜ್ಞಾನವನಂ ಕಳೆಯಲಿ ಕಲ್ಪವೃಕ್ಷದ ಕುಸುಂವುವು
ನಿನ್ನ ಸೌರಭ ಪಡೆಯಲೋಸುಗ ನಿನ್ನ ಹೃದಯದಿ ನೆಲಸಿದೆ ॥೪೩॥

೪೪ ಜನನಿ ನಿನ್ನಯ ಕೇಶಪಾಶದ ಅಂಧಕಾರವು ಬಲದಲಿ
ಸೂರ್ಯಕಿರಣವ ಹಿಡಿದು ತರುತಲಿ ಸೆರೆಯನಿರಿಸಿದ ತೆರದಲಿ
ಹೊಳೆವ ಕುಂಕುವಂ ತಿಲಕದಿಂದಲಿ ಎಸೆವ ವದನದ ಕಾಂತಿಯಂ
ಹರಿಯುತಿರುವುದೊ ಎಂಬ ತೆರದಲಿ ಕಾಣುತಿರುವುದು ಬೈತಲೆ ॥೪೪॥

೪೫ ಜನನಿ ತಾನೆಯೆ ವಕ್ರ ಭಾವವ ತಳೆದು ಮತ್ತೆಯಂ ಭೃಂಗದ
ಕಾಂತಿಯಿಂದಲಿ ಶ್ಯಾಮ ವರ್ಣದಿ ಎಸೆವ ಮುಂಗುರುಳಿಂದಲಿ
ಸುತ್ತುವರಿಯುತ ಮಂದಹಾಸವ ಬೀರಿ ದಂತದ ಪಂಕ್ತಿಯಂ
ಪ್ರಭೆಯಂ ಕೇಸರದಿಂದ ನಂದನವನದ ಚೆಲುವಲಿ ಮೆರೆಯುವೆ ॥೪೫॥

ಸರಸ ಗಂಧವ ಬೀರಿ ಮನಕಾನಂದವೀಯುವ ಸೊಬಗಿನ
ಹೃದಯವರಳಿಪ ದಿವ್ಯ ತೇಜದ ನಿನ್ನ ಮುಖವನು ಕಾಣಲುಂ
ಚೆಲುವ ಮನ್ಮಥನವನ ಗೆಲಿದಿಹ ಶಿವನು ಎಂಬುವ ಕಂಗಳುಂ
ಹರ್ಷ ಉಕ್ಕಿತ ಮೋಹಗೊಳ್ಳುತ ಅತುಳ ಸಂತಸಗೊಳ್ವವು ॥೪೬॥

೪೭ ತಾಯೆ ನಿನ್ನಯ ವರಕಿರೀಟದ ಅಗ್ರಭಾಗದಿ ಮಿರುಗುವ
ದಿವ್ಯ ತೇಜದ ಅರ್ಧಚಂದ್ರನ ನೀನು ಧರಿಸಿಹೆ ಸೊಬಗಲಿ
ನಿನ್ನ ಹೊಳೆಯುವ ಹಣೆಯಂ ಚಂದ್ರನ ಬೇರೆ ಅರ್ಧದ ಭಾಗವು
ಇಲ್ಲವಾದರೆ ಪ್ರತಿಯಂ ಮಾಸವು ಕ್ಷಯದ ರೋಗದಿ ಬಳಲುವ ॥೪೭॥

ಹೀನ ಚಂದ್ರಗೆ ಎಂತು ಬರುವುದು ಮತ್ತೆ ಮತ್ತೆಯಂ ಕಾಂತಿಯಂ
ನಿನ್ನ ನೊಸಲನು ಅರ್ಧಚಂದ್ರನ ಎರಡು ಜೋಡಿಸಿ ಸೇರಿಸಿ
ಅಮೃತ ಲೇಪಿಸಿ ಬಿರುಕು ನಶಿಸುವ ತೆರದಿ ಮಾಡುತಲಿರುತಿರೆ
ದಿವ್ಯ ಷೋಡಶ ಕಲೆಯ ತೇಜದ ಪೂರ್ಣಚಂದ್ರನು ಬೆಳಗುವ ॥೪೮॥

Sri Vidyabharathi Book Centre, Sringeri

CC-O. In Public Domain. Digitized by eGangotri

೪೭ ಜಗದ ದುಃಖವ ಕಳೆಯಲೋಸುಗ ನಿರತಳಾಗಿಹ ತಾಯಿಯೆ,
ನಿನ್ನ ಹುಬ್ಬಿಗೆ ದುಂಬಿವಿಂಡಿನ ಹೊಳೆವ ಕಾಂತಿಯು ನಾಚಿಪ
ಚೆಲುವ ನಯನದ ಕಪ್ಪು ಪ್ರಭೆಯನು ಹೆದೆಯು ವಹಿಸುತ
ಇರಿಸುತ
ಬಲದ ಕರದಲಿ ಮದನ ಪಿಡಿದಿಹ ಬಿಲ್ಲು ಎನ್ನುತ ಭಾವಿಪೆ ॥೭೨॥

೪೮ ದೇವಿ ನಿನ್ನಯ ಬಲದ ನಯನವು ಸೂರ್ಯನಂತೆಯೆ
ಹೊಳೆಯುತ
ದಿನವ ಸೃಜಿಪುದು ಎಡದ ನಯನವು ಚಂದ್ರನಂತೆಯೆ ಮಿರುಗುತ
ರಾತ್ರಿ ಗೈವುದು ಮತ್ತೆ ಅರಳಿದ ಹೇಮ ಕಾಂತಿಯ ಕಮಲದ
ಪರಿಯೆ ಮೂರನೆ ನಯನ ಸಾಯುಂ ಉಷೆಯ
ಸೃಜಿಸುತಲಿರುವುದು ॥೭೩॥

೪೯ ತಾಯಿ ನಿನ್ನಯ ನೋಟವಿರುವುದು ಬಹು ವಿಶಾಲವು ಶುಭಕರ
ಮತ್ತೆ ದುರ್ಜಯ ಕರುಣೆಪೂರಿತ ಏನು ತಿಳಿಯದ ಮಂಥರವು
ವಿವಿಧ ಭೋಗವನೀಯುತಿರುವದು ಭಕ್ತಜನರನು ಪೊರೆವುದು
ಸಕಲ ಕಾರ್ಯವು ಸಿದ್ಧಿಗೊಳ್ಳುತ ವಿಜಯಿಯಹಾಗುತ ಮೆರೆವವು ॥೭೪॥

ಮೇಲೆ ಉಸುರಿದ ಎಂಟು ರೀತಿಯ ಗುಣಗಳಿಂದಲಿ ಶೋಭಿಪ
ಆ ವಿಶಾಲೆಯು ಮತ್ತೆ ಕಲ್ಯಾಣೀ ಅಯೋಧ್ಯೆಯು ಧಾರೆಯು
ಮಂಥರೆ ಭೋಗಾವತಿ ಅವಂತಿಯು ವಿಜಯ ಪುರಗಳು ಶ್ರೇಷ್ಠವು
ಖ್ಯಾತವಾಗುತ ಮೆರೆಯುತಿರುವವು ಜಗದಿ ನಿನ್ನಯ
ಕೃಪೆಯಲಿ ॥೭೫॥

೫೦ ವರಕವೀಂದ್ರರು ರಚಿಪ ನವರಸ ಭರಿತ ಕಾವ್ಯದ ಅಮೃತವ
ಸವಿಯಲೋಸುಗ ನಿನ್ನ ಕಿವಿಗಳು ಸತತ ಕಾತರಗೊಂಡಿವೆ
ಎರಡು ಕಣ್ಣುಂಬಿಗಳು ನವರಸ ಸವಿಯುಂತಲ್ಲಿಯೆ ಇರುವವು
ನಿನ್ನ ಮೂರನೆ ಕಣ್ಣು ಸೊಬಗಿನ ಕೆಂಪಗಾಗಿದೆ ಕೋಪದಿ ॥೭೬॥

Sri Vidyaranya Book Centre, Sringeri

CC-O. In Public Domain. Digitized by eGangotri

ಹರನ ಮೇಲಕೆ ನಿನ್ನ ದೃಷ್ಟಿಯು ಶೃಂಗಾರ ರಸಮಯವಾಗಿದೆ
ಅನ್ಯ ಜನಗಳ ವಿಷಯ ನೀ ಬೀಭತ್ಸದಿಂದಲಿ ನೋಡುವೆ
ನಿನ್ನ ಸವತಿಯ ಗಂಗೆ ವಿಷಯದಿ ರೌದ್ರ ರಸದಲಿ ನೋಡುವೆ
ವಿಷವ ಕುಡಿದಿಹ ಶಿವನ ವಿಷಯದಿ ಚಕಿತ ಭಾವವ ತಳೆದಿಹೆ ॥೭೭॥

೫೧ ಹರನು ಧರಿಸಿಹ ಸರ್ಪ ನೋಡುತ ಭಯದ ರಸವನು ಸೂಚಿಪೆ
ಕಮಲ ಪುಷ್ಪವ ಧರಿಸಿ ಶೌರ್ಯದ ವೀರರಸವನು ತೋರಿಸಿ
ನಿನ್ನ ಭಕ್ತರ ಮೇಲೆ ಪ್ರೇಮದಿ ಕರುಣೆಯಿಂದಲಿ ನೋಡುವೆ
ನಿನ್ನ ಸಖಿಜನ ವೃಂದ ವಿಷಯದಿ ಹಾಸ್ಯ ರಸದಲಿ ನೋಡುವೆ ॥೭೮॥

೫೨ ಗಿರಿಯ ನಿಕರಕೆ ರಾಜನಾಗಿಹ ಆ ಹಿಮವಂತನ ವಂಶಕೆ
ಶಿರದಿ ಧರಿಸುವ ಹೂವ ಮೊಗ್ಗೆಯ ತೆರದಿ ಗಂಧವ ಬೀರುವ
ದೇವಿ ಪಾರ್ವತಿ ಕಿವಿಯತನಕದಿ ಹಬ್ಬಿ ಸೊಗಯಿಪ ಕಂಗಳು
ಹಕ್ಕಿ ಗರಿಗಳ ತೆರದಿ ಶಿರದಲಿ ಕೇಶ ಪಾಶದಿ ಸೊಗಯಿಪ ॥೭೯॥

ಶಿವನ ಹೃದಯವ ಕದಡಿ ಮತ್ತೆಯು ಮನದ ಶಾಂತಿಯ
ಕೆಡಿಸುತ

ಅಲ್ಲಿ ನೀ ಶೃಂಗಾರ ರಸವನು ಸೃಜಿಸಿ ಚಂಚಲ ಮಾಡಿಹೆ
ಕಿವಿಯ ತನಕದಿ ಉದ್ದವಾಗುತ ಹಬ್ಬಿ ಹೊಳೆಯುವ ಕಂಗಳು
ಚೆಲುವ ಮನ್ಮಥನವನ ಶಿರಗಳೊ ಎಂಬ ತೆರದಲಿ ಕಾಂಬವು ॥೮೦॥

೫೩ ಕರಿಯ ಕಾಡಿಗೆಯಿಂದ ಎಸೆಯುವ ಮೂರು ನಿನ್ನಯ ಕಂಗಳು
ಸತ್ವ ರಜತಮ ಮೂರು ಗುಣಗಳ ತೋರುತಿರುವುವು ತಾಯಿಯೆ
ಪ್ರಳಯ ಕಾಲದಿ ದೇವನುದರದಿ ಐಕ್ಯ ಪಡೆದಿಹ ಬ್ರಹ್ಮನ
ವಿಷ್ಣು ರುದ್ರರ ಮತ್ತೆ ಸೃಜಿಸಲು ಧರಿಸಿದಂತೆಯೆ ತೋರ್ಪವು ॥೮೧॥

೫೪ ಹರನ ಹೃದಯದ ಪಟ್ಟದರಸಿಯೆ ನೀನು ಕರುಣಾಮೃತದಲಿ
ನಮ್ಮ ಉದ್ಧಾರವನು ಗೈಯಲು ಅರುಣ ಶುಭ್ರದ ಶ್ಯಾಮದ
ಮೂರು ಕಂಗಳು ಪುಣ್ಯ ಶೋಣಾ ಗಂಗೆ–ಯಮುನೆಯ ನದಿಗಳ
ಧರಿಸಿ ನಮ್ಮಯ ಪಾಪ ಕಳೆಯುತ ಶುದ್ಧ ಆತ್ಮರ ಮಾಳ್ಪುದು ॥೮೨॥

Sri Vidyabharathi Book Centre, Sringeri

CC-O. In Public Domain. Digitized by eGangotri

೫೫ ನೀನಂ ಕಣ್ಣನು ತೆರೆಯುತಿರುತಿರೆ ಜಗವು ಸೃಜಿಪುದಂ ಕೃಪೆಯಲಿ
ಕಣ್ಣು ಮುಚ್ಚಲು ಪ್ರಳಯವಾಗುತ ಜಗವು ನಶಿಪುದು ಎನ್ನುತ
ಸಾಧು ಸಂತರು ಹೇಳುತಿರುವರು ನೀನು ಕಣ್ಣನು ತೆರೆಯುತ
ಎಂದುಂ ಮುಚ್ಚದೆ ಜಗವ ಪೊರೆಯುವಿ ಎಂದುಂ ಭಾವಿಪೆ
ತಾಯಿಯೆಂ ॥೮೫॥

೫೬ ಎಲೆಯಂ ತಿನ್ನುತ ಶಿವನ ಪಡೆಯಲುಂ ತಪವ ಗೈದಿಹ ತಾಯಿಯೆಂ
ಕಿವಿಯು ತನಕದಿ ಹಬ್ಬಿ ಎಸೆಯುವ ನಿನ್ನ ಕಂಗಳ ನೋಡುತ
ಮುತ್ಸ್ಯ ನಿಕರವು ಚಕಿತವಾಗುತ ನಿನ್ನ ಕಂಗಳು ಕಿವಿಯಲಿ
ನಿಂದೆ ಗೈವವೊ ಎಂಬ ತೆರದಲಿ ನೀರಿನೊಳಗಿವೆ ಅಂಜುತ ॥೮೪॥

ದೇವಿ ನಿನ್ನಯ ಹೊಳಿವ ನಯನದ ದಿವ್ಯ ಕಾಂತಿಯಲಿ
ನಿಶೆಯಲಿ
ನೀಲ ಕುವಲಯ ನಿಕರ ಮುಧ್ಯದಿ ನೆಲಸಿ ಬಿರಿಯಿಸಿ ಅರಳಿಸಿ
ಮುತ್ತೆ ಉಷೆಯಲಿ ನೀಲ ಕುವಲಯ ದಳಗಳಿಲ್ಲವ ಮುಚ್ಚುತ
ಮರಳಿ ಬರುತಲಿ ನಿನ್ನ ನಯನದಿ ವಾಸವಗೂಡುತಲಿರುವುದು ॥೮೫॥

೫೭ ಶಿವೆಯೆ ನಿನ್ನಯ ವಿತತ ವಿಕಸಿತ ಚೆಲುವ ಕಮಲದ ತೆರದಲಿ
ಹೊಳೆವ ನಿನ್ನಯ ಕರುಣನೋಟದಿ ಎನ್ನ ನೋಳ್ಪುದು
ಕೃಪೆಯಲಿ
ನಿನ್ನ ನೋಟದ ಪ್ರೇಮದಮೃತದ ಮಳೆಯು ಸುರಿಸುತ
ಪ್ರೇಮದಿ
ಎನ್ನ ಪಾಪವ ಸಕಲ ಕಳೆವುದು ಧನ್ಯನಾಗುವೆ ತಾಯಿಯೆ ॥೮೭॥

ಮುತ್ತು ರತ್ನದ ಹೊನ್ನ ಕಳಶದ ಭವ್ಯ ಆರಮನೆ ಮೇಲಕೆ
ಮುತ್ತೆ ವನದೊಳು ಇರುವ ಹುಲ್ಲಿನ ಹೀನ ಗುಡಿಸಲ ಮೇಲಕೆ
ಪೂರ್ಣ ಚಂದ್ರನು ಒಂದೆ ಪರಿಯಲಿ– ಬೆಳಕ ಚೆಲ್ಲುವ ತೆರದಲಿ
ನಿನ್ನ ನೋಟದ ವೈಭವಾತಿಶಯವೆ ಸಮದಿಸಿಪುದಂ ॥೮೭॥

CC-O. In Public Domain. Digitized by eGangotri

CC-O. In Public Domain. Digitized by eGangotri

೫೮ ತಾಯೆ ಹಿಮಗಿರಿತನಯೆ ನಿನ್ನಯ ವಕ್ರ ನಯನದ ಮತ್ತೆಯು
ಕವಿಯ ನಡುವಿನ ತಾಣ ಕಾಣುತ ಚೆಲುವ ಮದನನ ಧನುವಿದು
ಎನುತ ಮೋಹದಿ ಭ್ರಾಂತಿಗೊಳ್ವರು ಲೋಕ ಜನಗಳು ಬೆರಗಲಿ
ಕವಿಯ ದಾಟುತ ಬಿಲ್ಲ ಜಗ್ಗ್ಗುತಲಿರುವ ಪರಿಯಲಿ ಕಾಂಬುದು ॥೫೮॥

೫೯ ರತ್ನ ಖಚಿತದ ಕರ್ಣಕುಂಡಲವೆರಡು ಹೊಳೆಯುತ ಬಿಂಬಿಸಿ
ಚೆಲುವ ಮದನನ ನಾಲ್ಕು ಚಕ್ರದ ರಥದ ತೆರದಲಿ ಶೋಭಿಪೆ
ನಿನ್ನ ಸುಂದರ ಮೊಗದ ರಥವನು ಏರಿ ಮನ್ಮಥ ದೇವನು
ಸೂರ್ಯ ಚಂದ್ರರ ಚಕ್ರದಿಂದಲಿ ಎಸೆವ ವಿತತದ ಭೂವಿಯು ॥೫೯॥

ಸೈನ್ಯ ಸಹಿತದಿ ಸಿದ್ಧನಾಗುತ ಶಿವನ ಜೊತೆಯಲಿ ಯುದ್ಧಕೆ
ತೆರಳುತಿರುತಿಹ ಪರಿಯೆ ಕಾಂಬುದು ನಿನ್ನ ಮುಖ ಸೌಂದರ್ಯವು
ನೊಸಲ ನಯನವ ತೆರೆದು ಮದನನ ಭಸ್ಮವಾಡಿದ ತೆರದಲಿ
ನಮ್ಮ ಕಾವುವ ಭಸ್ಮ ಮಾಳ್ಪುದು ನಿನ್ನ ನೋಟದಿ ಕೃಪೆಯಲಿ ॥೬೦॥

೬೦ ವರಸರಸ್ವತಿ ಸುಧೆಯ ಸವಿಯನು ತೊರೆದು ಮನವನು ತಣಿಸುವ
ನಿನ್ನ ಸುಮಧುರ ದನಿಯ ಕೇಳುತ ನಿನ್ನ ಮಾತಿನ ಮೋಡಿಗೆ
ಮೋಹಗೊಳ್ಳುತ ಶಿರವ ತೂಗಲು ಕರ್ಣಕುಂಡಲ ಅಲುಗುತ
ನಿನಗೆ ಉತ್ತರ ಕೊಡುವ ತೆರದಲಿ ಕಾಣುತಿರುವವು ತಾಯಿಯೆ ॥೬೦॥

೬೧ ಹೇ ಹಿಮಂತನ ಕುಲಕೆ ಧ್ವಜಪರಿ ಎಸೆವ ಪಾವನ ದೇವಿಯೆ
ನಿನ್ನ ನಾಸಿಕವೆಮಗೆ ಇಷ್ಟಾರ್ಥವನು ಸಕಲವನೀಯಲಿ
ತಣ್ಣ ಉಸಿರಿಗೆ ಅಲ್ಲಿ ಸುಂದರ ಮುತ್ತು ನಿಕರವು ಆಗುತ
ಚೆಲುವ ಮೂಗಿನ ಹೊರಗೆ ಸೂಸುವ ಪರಿಯೆ
ಸೊಗಸುತಲಿರುವವು ॥೬೧॥

೬೨ ಚೆಲುವ ದಂತ ಶ್ರೇಣಿಯಿಂದಲಿ ಮೆರೆವ ಹಿಮಗಿರಿತನಯೆಳಿ
ಸಹಜ ಸುಂದರ ನಿನ್ನ ಅಧರದ ಕೆಂಪುಕಾಂತಿಯ ನೋಡುತ
ಹವಳ ಬಳ್ಳಿಯು ತನ್ನ ಜನ್ಮವ ಸಫಲಗೊಳಿಸಲಿ ಹರುಷದಿ
ತೊಂಡೆ ಹಣ್ಣಿನ ಕೆಂಪು ಸೊಗಸದು ಲಜ್ಜೆಯಿಂದಲಿ ಹೊಳೆಯುದು ॥೬೩॥

Sri Vidyabharathi Book Centre, Sringeri

CC-O. In Public Domain. Digitized by eGangotri

೬೩ ನಿನ್ನ ಮುಖಚಂದ್ರಮನ ಬೆಳದಿಂಗಳಿನ ಅಮೃತವ ಕುಡಿಯುಂತ
ಆ ಚಕೋರದ ಪಕ್ಷಿನಿಕರವು ಅರುಚಿಯಾಗಲುಂ ಅತುಂಳದಿ
ತಮ್ಮ ಜಿಹ್ವೆಯು ಅರುಚಿ ಕಳೆಯುಲುಂ ಪಕ್ಷಿ ನಿಕರವು ನಿಶೆಯುಲಿ
ಹುಳಿಯುಂ ರುಚಿ ಇಹ ಚಂದ್ರಕಿರಣದ ಪ್ರಭೆಯ
ಕುಡಿಯುಂತಲಿರುಂವವು ॥೯೪॥

೬೪ ಕೆಂಪುವರ್ಣದ ಪುಷ್ಪ ದಾಸ್ವಾಳಂತೆ ಸೊಗಯಿಪ ಜಿಹ್ವೆಯುಂ
ದಿನವು ನಿನ್ನಯುಂ ಪತಿಯುಂ ಮುಹಿಮೆಯುಂ ಗುಣವ
ಸ್ತುತಿಸುಂತಲಿರುಂವುದುಂ
ನಿನ್ನ ನಾಲಗೆಯೊಳಗೆ ನೆಲಸಿದ ವರ ಸರಸ್ವತಿ ದೇವಿಯುಂ
ಕೆಂಪುವರ್ಣವು ಚೆಲ್ಲಿ ಮಾಣಿಕ ದೇಹದಂತೆಯೆಂ ಎಸೆವಳುಂ ॥೯೫॥

೬೫ ರಣದಿ ಅಸುರರ ಜೊತೆಗೆ ಯುದ್ಧವ ಗೈದುಂ ಬಳಲುಂತ ಬರುಂತಲಿ
ಇಂದ್ರ ವಿಷ್ಣುವು ದೇವ ನಿಕರವು ಶರದ ಕವಚವ ತೆಗೆಯುಂತ
ನಿನ್ನ ಪಾದದ ಬಳಿಯೆ ಕೂಡುಲ್ತ– ಶುಭ್ರ ಕರ್ಪೂರ ಗಂಧದ
ನೀನುಂ ಸವಿದಿಹ ಸವಿಯು ತಾಂಬೂಲವನುಂ ಕೊಳ್ಳುತ ಸವಿವವರುಂ ॥೯೬॥

೬೬ ವರ ಸರಸ್ವತಿ ವೀಣೆಯಿಂದಲಿ ಶಿವನ ಸ್ತುತಿಸುಂತಲಿರುಂತಿರೆ
ನೀನುಂ ಒಲಿಯುಂತ ಶಿರವ ತೂಗುಂತ ನುಡಿಯುಂತಿರುಂತಿರೆ ಸವಿಯುಲಿ
ನಿನ್ನ ಸುಮಂಧುರ ದನಿಯುಂ ವೀಣೆಯುಂ ಮುಧುರನಾದವ ಅಣಕಿಸೆ
ವಾಣಿ ತನ್ನಯುಂ ವೀಣೆ ಕಟ್ಟುತ ಗೌಸಿನೊಳಗಡೆ ಇಟ್ಟಳುಂ ॥೯೭॥

೬೭ ಆ ಹಿಮುಂತನು ಪ್ರೀತಿಯಿಂದಲಿ ತೊರೆದ ಚೆಂದುಟಿ ಸವಿಯನುಂ
ಸವಿಯುಲೋಸುಗ ತವಕಗೊಳ್ಳುತ ಶಿವ ಕರಾಗ್ರದಿ ನಯುದಲಿ
ನಿನ್ನ ಗದ್ದವ ಪಿಡಿದು ಮುಖ ಕನ್ನಡಿಯ ಮೇಲಕೆ ಎತ್ತಿರೆ
ನಿನ್ನ ಗದ್ದಕೆ ಉಪಮೆ ಇಲ್ಲವು ಎಂತು ಬಣ್ಣಿಪೆ ತಾಯಿಯೆಂ ॥೯೮॥

೬೮ ನಿನ್ನ ಕೊರಳೊಳು ಧರಿಸಿಕೊಂಡಿಹ ಶುಭ್ರ ಮಣಿಗಳ ಮಹಾಲೆಯುಂ
ನಿನ್ನ ತನುವಿನ ಗಂಧದೊಳಗಡೆ ಬೆಳೆದ ಕಮಲದ ಬಳ್ಳಿಯಂ
ತಬ್ಬಿಕೊಳ್ಳುತ ಸುತ್ತುವರಿದಿದೆ ದಿವ್ಯ ಪ್ರಭೆಯನುಂ ಬೀರುತ
ಮುತ್ತೆ ಕಮಲದ ದೇಟು ಸುತ್ತಲುಂ ಮೃದುವು ಮುಳ್ಳುಗಳಿಸೆವವು ॥೯೯॥

Sri Vidyabharathi Book Centre, Sringeri

CC-O. In Public Domain. Digitized by eGangotri

ನಿನ್ನ ಭುಜಗಳು ನೀಳವಹಾಗುತ ಅತುಳ ಕೋಮಲವಾಗಿವೆ
ಕಮಲ ನಾಲದ ಉಪಮೆ ಕೊಟ್ಟೆನು ಎಂದು ಬೇಸರ ಪಡದಿರು
ಶಿವನು ನಿನ್ನನು ಅಪ್ಪುತಿರುತಿರೆ ದೇಹ ರೋಮವು ಎಲ್ಲವು
ಭರದಿ ರೋಮಹಾಂಚನವಗೊಳ್ವುದು ಭುಜದ
ರೋಮವನುಳಿಯುತ ॥೧೦೦॥

೯೯ ಮಧುರ ಸಂಗೀತದ ರಸಾಮೃತ ಸಾರಪೂರಿತ ದೇವಿಯೆ
ನಿನ್ನ ಲಗ್ನದಿ ಶಿವನು ನಿನ್ನಯ ಚೆಲುವ ಕೊರಳಿಗೆ ಕಟ್ಟಿದ
ಪರಮ ಮಂಗಳಸೂತ್ರ ಜೊತೆಯಲಿ ಮೂರು ಎಳೆಗಳು
ಕಾಂಬವು
ವಿವಿಧ ರಾಗದ ಮೂಲ ಸ್ಥಾನವು ನಿನ್ನ ಪಾವನ ಕೊರಳಿದೆ ॥೧೦೧॥

ಸಕಲ ರಾಗದಿ ಷಡ್ಜ ಮಧ್ಯಮ ಮತ್ತೆ ಗಾಂಧಾರೆಂಬವು
ಮೂರು ರಾಗಗಳಿಹವು ಮುಂಖ್ಯವು ಮನವ ತಣಿಪವು
ಮುಂದದಲಿ
ಇದಕೆ ಸಂಶಯವಿಲ್ಲವೆನುತಲಿ ತೋರಲೋಸುಗ ಸುಂದರ
ಮೂರು ಎಳೆಗಳು ನಿನ್ನ ಕೊರಳಲಿ ಶೋಭಿಸುತ್ತಿವೆ ಜನನಿಯೆ ॥೧೦೨॥

೨೦ ತಾಯೆ, ಬ್ರಹ್ಮನು ತನ್ನ ಶಿರವದು ಒಂದು ಕಳೆಯಲು ಬಳಲುತ
ಶಿವನ ಉಗುರಿಗೆ ಹೆದರಿ ಉಳಿದಿಹ ನಾಲ್ಕು ಶಿರಗಳ ಉಳಿಸಲು
ನಾಲ್ಕು ಬಾಯಿಂಗಳಿಂದ ನಿನ್ನಯ ನಾಲ್ಕು ಭುಜಗಳ ಅನುಪಮ
ದಿವ್ಯ ಸೌಂದರ್ಯವನು ಹೊಗಳುವ ಲೋಕಸುಂದರಿ
ದೇವಿಯೆ ॥೧೦೩॥

೨೧ ನಿನ್ನ ಉಗುರಿನ ದಿವ್ಯ ಕಾಂತಿಯು ಆಗ ತಾನೇ ಅರಳಿದ
ಕೆಂಪು ಕಮಲದ ಅಮಲ ತೇಜವ ನಾಚಿಸುತ್ತಿದೆ ಹೀನದಿ
ನಿನ್ನ ಕೋಮಲ ಕರಕೆ ಕಮಲವು ಸಾಟಿಯಹಾಗದು ಸೊಗಸದು
ಭವದ ತಾಪವು ಕಳೆವ ನಿನ್ನಯ ಕರವ ವರ್ಣಿಸಲಾರೆನು ॥೧೦೪॥

Sri Jagadguru Bharathi Book Centre, Sringeri

CC-O. In Public Domain. Digitized by eGangotri

ಕಮಲ ಪತ್ರದಿ ವಾಸ ಮಾಡುವ ಚೆಲುವ ಲಕ್ಷ್ಮೀದೇವಿಯು
ತನ್ನ ಪಾದಕೆ ಬಳಿದುಕೊಂಡಿಹ ಕೆಂಪು ಲಾಕ್ಷಾ ರಸವದು
ಕಮಲ ಪತ್ರಕೆ ಅಂಟಿಕೊಳ್ಳಲು ನಸುವು ಮಾತ್ರವು ಸಾಮ್ಯವು
ತೋರ್ವ ಶಕ್ಯತೆ ಇಹುದು ದೇವಿಯೆ ಲೋಕ ಪೂಜ್ಯಳೆ
ವಂದ್ಯಳೆ ॥೧೦೫॥

೨೨ ಒಂದೆ ಕಾಲದಿ ವರಕುಮಾರನ ಮುತ್ತೆ ಗಣಪತಿ ಕುವರರ
ಹಸಿವೆ ಕಳೆಯುತ– ತುಪ್ಪಗೊಳಿಸುವ ನಿನ್ನ ಸ್ತನಮಂಡಲವದು
ಎಮ್ಮ ಕಷ್ಟವನೆಲ್ಲ ಕಳೆಯುತ ಮನದ ದುಗುಡವ ನೀಗಿಸಿ
ಸುಧೆಯು ಸುರಿಸುತ ಹೃದಯವರಳಿಸಿ ಶಾಂತಿ ಸುಖವನು
ಈಯಲಿ ॥೧೦೬॥

ಹಾಲು ಸುರಿಯುವ ನಿನ್ನ ಕುಚವನು ಕಂಡು ಗಜಮುಖ
ಭಯದಲಿ
ತನ್ನ ಶಿರವನು ತರಿದು ಇಟ್ಟಿಹರೇನೋ ಎನ್ನುತ ಶಂಕಿಸಿ
ತನ್ನ ಶಿರವದು ಇಹುದು ಇಲ್ಲವೊ ಎನುತ ತನ್ನಯ ಕರದಲಿ
ಶಿರವ ಮುಟ್ಟುತ ನೋಡಿಕೊಳ್ಳುತಲಿರ್ದ ಪಾರ್ವತಿ ದೇವಿಯೆ ॥೧೦೭॥

೨೩ ಪರ್ವತೇಂದ್ರನ ಕೀರ್ತಿ ಸಾರುವ ಧ್ವಜದ ಪರಿಯಲಿ ಇರುತಿಹ
ತಾಯೆ ಪಾರ್ವತಿ ಚೆಲುವ ಮಣಿಕ ರತ್ನದಿಂದಲಿ ಕೆತ್ತಿದ
ನಿನ್ನ ಕುಚಗಳು ಅಮೃತ ರಸದಲಿ ತುಂಬಿತುಳುಕುವ ಸಮುದ್ರ
ಎರಡು ಕುಂಭಗಳಿಹವು ಏನೂ ಇದಕೆ ಸಂಶಯವಿಲ್ಲವು ॥೧೦೮॥

ಇಲ್ಲವಾದರೆ ನಿನ್ನ ಕುಚಗಳು ಸುರಿವ ಹಾಲನು ಕುಡಿದಿಹ
ನಿನ್ನ ತನಯರು ಜನಿಸಿ ಎಷ್ಟೋ ಕಲ್ಪ ವರ್ಷಗಳಾದರೂ
ಚೆಲುವ ಸ್ತ್ರೀಯರ ಮೋಹಜಾಲದಿ ಎಂತು ಬೀಳದೆ ಇರ್ಪರು
ನಿನ್ನ ಕುಚಗಳು ಸುರಿವ ಹಾಲನು ಆವ ಪರಿಯಲಿ ವರ್ಣಿಪೆ ॥೧೦೯॥

Sri Vidyabharathi Book Centre, Sringeri

CC-O. In Public Domain. Digitized by eGangotri

೭೪ ಆ ಗಜಾಸುರನವನ ಕುಂಭಸ್ಥಳದ ಮುತ್ತನು ಪೋಣಿಸಿ
ನಿನ್ನ ಕೊರಳಲಿ ಧರಿಸಿಕೊಂಡಿಹ ದಿವ್ಯ ಮುತ್ತಿನ ಮಾಲೆಯು
ತೊಂಡೆ ತುಟಿಗಳ ಕೆಂಪು ಕಾಂತಿಯು ಶಿವನ ಅದ್ಭುತ ಶೌರ್ಯದ
ಕೀರ್ತಿ ಮಾಲೆಯಂ ನಿನ್ನ ಎದೆಯೊಳು ಧರಿಸಿದಂತೆಯೆ
ಹೊಳೆವುದು ॥೧೧೦॥

೭೫ ಹೇ ಹಿಮಂತನ ಸುತೆಯೆ ನಿನ್ನಯ ಸ್ತನವ ನಿನ್ನಯ ಹೃದಯದಿ
ಜನಿಸಿದಂಥಹ ಕ್ಷೀರಸಾಗರ ಹರಿವುದೆನ್ನುತ ಭಾವಿಪೆ
ನೀನು ಕರುಣಾಮಯಿಯು ಇತ್ತಿಹ ಸ್ತನವ ಪಾವನಗೈದಿಹ
ನಿಪುಣ ದ್ರಾವಿಡ ಶಿಶುವು ಎನ್ನನು ಪ್ರೌಢಕವಿಗಳು ಪೊಗಳ್ವರು ॥೧೧೧॥

೭೬ ಹರನ ಕೋಪಾಗ್ನಿಯಲಿ ಉರಿಯುತ ದಿಕ್ಕಾಗಾಣದ ಮನ್ಮಥ
ಉರಿಯನಾರಿಸಿಕೊಳ್ಳಲೋಸುಗ ಅತ್ತಲಿತ್ತಲು ಅಲೆಯುತ
ತನ್ನ ಪ್ರಾಣವ ಆವ ಮಾರ್ಗದಿ ಉಳಿಸಿಕೊಳ್ಳಲು ಭರದಲಿ
ನಿನ್ನ ನಾಭಿಯ ವರಸರೋವರದೊಳಗೆ ಧುಮುಕುತ ಬದುಕಿದ ॥೧೧೨॥

ಕೊಳದಿ ಮದನನು ಬೀಳುತಿರುತಿರೆ ಅಗ್ನಿ ಆರುತ ಧೂಮ್ರವು
ಬಳ್ಳಿತೆರದಲಿ ಮೇಲುಕೇಳುತ ಹೃದಯ ತನಕದಿ ಹಬ್ಬಿತು
ಇದನು ಕಾಣುತ ಲೋಕವೆಲ್ಲವು ರೋಮರಾಜಿಯು ಎನ್ನುತ
ಭ್ರಾಂತಿಯಿಂದಲಿ ಹೇಳುತಿರುವದು ಜನನಿ ಪಾರ್ವತಿದೇವಿಯೆ ॥೧೧೩॥

೭೭ ಯಮುನೆ ಸಲಿಲಿದ ತೆರೆಯ ತೆರೆದಲಿ ಶ್ಯಾಮವರ್ಣದಿ ಸೂಕ್ಷ್ಮದಿ
ನಿನ್ನ ಟೊಂಕದಿ ಕಾಣುತಿರುತಿಹ ಸೂಕ್ಷ್ಮ ವಸ್ತ್ರವ ನೋಡುತ
ಇದುವೆ ಆವುದು ಎಂದು ಮನದಲಿ ಯೋಚಿಸುತ್ತಿರೆ ಅತುಳದಿ

ನಿನ್ನ ಕುಚಗಳ ಮಧ್ಯೆ ಇರುತಿಹ ಸ್ಥಾನ ಕಾಲವು ಕಳೆಯಲು ॥೧೧೪॥
ನಿನ್ನ ಕುಚಗಳು ಒಂದನೊಂದನು ಅಟ್ಟಿ ಬೇಹುದು ಎನ್ನುತ
ಕಲಹಗೈಯ್ಯುತ ಅರಗಿನಂತೆಯೆ ಕೊಸರಿ ಕೆಳಗಡೆ ಜಾರುತ
ಗವಿಯ ತೆರದಲಿ ಇರುವ ನಿನ್ನಯ ವೃತ್ತ ನಾಭಿಯ ಮಧ್ಯದಿ
ಬಿದ್ದ ಗಗನವೆ ಎಂಬ ತೆರದಲಿ ಕಾಣುತಿರುವುದು ದೇವಿಯೆ ॥೧೧೫॥

Sri Vidyabharathi Booksellers, Bangalore

CC-O. In Public Domain. Digitized by eGangotri

೭೮ ನಿನ್ನ ನಾಭಿಯು ಅಚಲ ಗಂಗಾ ಜಲಪ್ರವಾಹದ ಮಂಥ್ಯದಿ
ಸುಳಿಯು ತೆರದಲಿ ತೋರುತಿರುವುದು ಮತ್ತೆ ನಿನ್ನಯ ಕುಚಗಳ
ಚೆಲುವ ಮೊಗ್ಗೆಗಳೆತ್ತಿ ಹಿಡಿದಿಹ ಕರಿಯ ರೋಮಾವಳಿಗಳ
ಬಳ್ಳಿ ಬೆಳೆದಿಹ ಪಾಚಿ ತೆರದಲಿ ಕಾಣುತಿರುವುದು ಸೊಗಸಲಿ ॥೧೧೬॥

ಜನರ ಹೃದಯವ ಮೋದಗೊಳಿಸುವ ಹೊಳೆವ
ಮನ್ಮಥನಾಗ್ನಿಯ
ಹೇವು ಕುಂಡವೊ ಮತ್ತೆ ಮದನನ ರತಿಯ ಭೋಗದ ಭವನವೊ
ಹರನ ನೇತ್ರದ ತಪಕೆ ಫಲವನು ಕೊಡುವ ಮಾರ್ಗದ ದ್ವಾರವೊ
ಎಂಬ ತೆರದಲಿ ತೋರುತಿರುವುದು ನಿನ್ನ ನಾಭಿಯು ದೇವಿಯೆ ॥೧೧೭॥

೭೯ ಗಿರಿಜೆ ಸಹಜದಿ ಕೃಶವು ಆಗಿಹ ನಿನ್ನ ಕುಚಗಳ ಭಾರವ
ಹೊರಲು ಆಗದೆ ಜೋತು ಬೀಳುತ ಬಾಗಿ ಬಳಕುವ ಕಾರಣ
ಆವ ಕಾಲದಿ ಹರಿದು ಬೀಳ್ವವೊ ಎಂಬ ಶಂಕೆಯು ಮೂಡುವ
ನಿನ್ನ ಮಧ್ಯದ ಸ್ಥಾನ ವರ್ಷಕಾಲದೊಳಗಿನ ಸ್ರೋತವು ॥೧೧೮॥

ಮೇರೆ ಮೀರುತ ಹರಿಯುತಿರುತಿರೆ ತೀರ ತಲದಲಿ ಎಸೆಯುವ
ಮುರಿದು ಬೀಳುವ ಮರದ ತೆರದಲಿ ಕಾಣುತಿರುವುದು
ತಾಯಿಯೆ
ನಿನ್ನ ಮಧ್ಯದ ಸ್ಥಾನ ಲೋಕವ ಕರುಣೆಯಿಂದಲಿ ಸಲಹಲಿ
ಬಹಳ ಕಾಲವು ಆದರ ಅಭ್ಯುದಯವನು ಗೈಯ್ಯಲಿ ದೇವಿಯೆ ॥೧೧೯॥

೮೦ ದೇವಿ ನಿನ್ನಯ ಪತಿಯ ಧ್ಯಾವ ಗೈಯುತ್ತಿರುತಿಹ
ಸಮಯದಿ
ಅತುಳ ಆನಂದದಲಿ ಬೆಮರುತ ನಿನ್ನ ಕಂಕುಳ ಮಾರ್ಗದಿ
ಬೆಮರು ಸುರಿಯುತ ನಿನ್ನ ಕುಪ್ಪಸ ನನೆದು ಬಿಗಿಯುಲಿ
ಬಿಗಿಯುತ
ವೃತ್ತವಾಗಹ ಸ್ವರ್ಣ ಕೊಡಗಳೊ ಎಂಬ ತೆರದಲಿ ಕಾಣುವ ॥೧೨೦॥

Sri Vidyabharathi Book Centre, Sringeri

CC-O. In Public Domain. Digitized by eGangotri

ನಿನ್ನ ಕುಚಮಂಡಲವ ಸೃಜಿಸಿದ ಮದನ ಕುಚಗಳ ಭಾರಕೆ
ನಿನ್ನ ಟೊಂಕವು ಮುರಿದು ಬೀಳದೆ ಇರಲಿ ಎನ್ನುತ ಶುಭ್ರದ
ಲವಲಿ ಎಂಬುವ ಬಳ್ಳಿಯಿಂದಲಿ ಪೂರು ಕಟ್ಟನು ಬಿಗಿದನು
ಎಂಬ ತೆರದಲಿ ಉದರ ಮೇಲಿಹ ತ್ರಿವಳಿ ಶೋಭಿಸುತಿರುವುದು ॥೧೨೧॥

೮೧ ದೇವಿ ನಿನ್ನಯ ಪಿತನು ಪರ್ವತರಾಜ ತನ್ನಯ ಭಾರವ
ಕಟಕ ಮತ್ತೆ ವಿಶಾಲ ರೂಪವ ನಿನಗೆ ಕಾಣಿಕೆಯಿತ್ತಿಹ
ಪಿತನು ಕಾಣಿಕೆಯಿತ್ತ ಸುಂದರ ಆ ನಿತಂಬದ ಸ್ಥಾನವು
ಜಗವ ವ್ಯಾಪಿಸಿ ಭೂಮಿ ಭಾರವ ಹಗುರು ಮಾಡಿದೆ
ತಾಯಿಯೆ ॥೧೨೨॥

೮೨ ವೇದಶಾಸ್ತ್ರವನೆಲ್ಲ ಅರಿತಿಹ ತಾಯೆ ಪಾರ್ವತಿ ದೇವಿಯೆ
ವೃತ್ತವಾಗಿಹ ನಿನ್ನ ಸುಂದರ ಎರಡು ತೊಡೆಗಳು ಸೊಗಸುತ
ಒಂದೆ ಸಮಯದಿ ವರ ಗಜೇಂದ್ರನ ನೀಳ ಸೊಂಡಿಲ ಸೊಬಗಲಿ
ಮತ್ತೆ ಹೊಂಬಾಳೆಗಳ ಕಂಬದ ಚೆಲುವಿನಿಂದಲಿ ಸೊಗಸುವೆ ॥೧೨೩॥

ದಿನವು ಹರನಿಗೆ ನಿನ್ನ ಮೊಣಕಾಲುಗಳ ನೆಲದಲಿ ಊರುತ
ನೀ ನಮಸ್ಕಾರವನು ಗೈಯ್ಯುವೆ ಅದುವೆ ಕಾರಣ ನಿನ್ನಯ
ಚೆಲುವ ಮೊಣಕಾಲುಗಳು ಕಠಿಣದಿ ಗಂಟು ಕಟ್ಟುತ ಬಿಗಿಯುತ
ದಿಗ್ಗಜಂಗಳ ಕುಂಭ ಸ್ಥಳಗಳ ಕಾಠಿಣ್ಯ ಗುಣವನು ವೀರಿದೆ ॥೧೨೪॥

೮೩ ಗಿರಿಜೆ, ಮಂದನನು ಹರನ ಗೆಲ್ಲಲು ನಿನ್ನ ಪಾದದ ನಖಿಗಳ
ಹತ್ತು ಶರಗಳ ಮಾಡಿ ಮತ್ತೆಯು ಎರಡು ಭಾಗವ ಗೈಯ್ಯುತ
ಕಾಲ ಹಿಮ್ಮಡಿಗೆಗಳ ಬತ್ತಳಿಕೆಗಳ ಎರಡನು ಮಾಡುತ
ಐಯ್ದು ಬಾಣಗಳಿಟ್ಟ ಒಂದೊಂದರಲಿ ಚೆಲುವಲಿ ದೇವಿಯೆ ॥೧೨೫॥

ದಿನವು ಇಂದ್ರಾದಿಗಳು ದಿವಿಜರು ನಿನಗೆ ನಮಿಸುತಲಿರುತಿರೆ
ಮದನನಿಟ್ಟಿಹ ಬಾಣ ದಿವಿಜರ ವರ ಕಿರೀಟದ ವಜ್ರಕೆ
ತಾಗಿ ತಿಕ್ಕುತ ಹರಿತವಾಯಿತು ಒಂದು ಬಾರಿಯು ಧೂರ್ಜಟಿ
ನಿನ್ನ ಪಾದದ ನಖದ ತೇಜಸು ಕೆಡದೆ ಜಾಲಿಸಿ ಸೆಲುಕಿದ ॥೧೨೬॥

Sri Vidyabharathi Book Centre, Sringeri

CC-O. In Public Domain. Digitized by eGangotri

೮೪ ತಾಯೆ, ಪರಮೇಶ್ವರನಂ ಶಿರದಲಿ ಜಡೆಯಂ ಮಧ್ಯದಿ ಧರಿಸಿಹ
ಗಂಗೆ ನಿನ್ನಯ ಚರಣ ತೊಳೆಯಲು ಯೋಗ್ಯವಾಗಿಹ ತೀರ್ಥವು
ನಿನ್ನ ಪಾದಕೆ ಬಳಿದುಕೊಂಡಿಹ ಕೆಂಪು ಲಾಕ್ಷಾರಸವದಂ
ಹರಿಯ ಶಿರದಲಿ ಎಸೆವ ಚೂಡಾಮಣಿಯ ಸೊಬಗದು ಎನಿಸಿದೆ ॥೧೨೭॥

ಜನನಿ ನಿನ್ನಯ ಪಾದ ಕಮಲದ ಪುಣ್ಯ ಮಹಿಮೆಯಂ ವರ್ಣಿಪ
ಉಪನಿಷತ್ತುಗಳೆಲ್ಲ ತತ್ವವ ತಿಳಿಯಲಾರದೆ ತೊಳಲುತ
ಆರಸಂತಿರುತಿಹ ದಿವ್ಯ ಮಹಿಮೆಯ ನಿನ್ನ ಚರಣದ್ವಯವನಂ
ಎನ್ನ ಶಿರದಲಿ ಇಟ್ಟು ಎನ್ನಯ ಜನ್ಮ ಸಾರ್ಥಕಗೊಳಿಪುದಂ ॥೧೨೮॥

೮೫ ಆಗ ತಾನೆ ಕೆಂಪು ಲಾಕ್ಷಾರಸವ ಲೇಪಿಸಿಕೊಳ್ಳುತ
ಚೆಲುವ ಸೊಗಯಿಪ ನಿನ್ನ ಚರಣವ ಭಕ್ತಿಯಿಂದಲಿ ನಮಿಪೆನಂ
ನಿನ್ನ ಪಾದದ ಪೆಟ್ಟ ತಿನ್ನುವ ಭಾಗ್ಯ ಪಡೆದಿಹ ಅಶೋಕದ
ವೃಕ್ಷ ವಿಷಯದಿ ಇರುವ ಪ್ರೇಮವ ಹರನಂ ಕಳೆದಿಹ
ತಾಯಿಯೆಂ ॥೧೨೯॥

೮೬ ನಿನ್ನ ಗಂಡನಂ ಲಕ್ಷ್ಯವಿಲ್ಲದೆ ನಿನ್ನ ಹೆಸರನಂ ಬಿಡುತಲಿ
ಜಡೆಯೊಳಿರುತಿಹ ನಿನ್ನ ಸವತಿಯ ಗಂಗೆ ಹೆಸರನು ಕೂಗುತ
ಲಜ್ಜೆಯಿಂದಲಿ ಶಿರವ ಬಾಗಿಸಿ ಸಂಭ್ರಮಿಸಿರ್ದಿದ ಕಾಣುತ
ನಿನ್ನ ಚರಣಗಳಿಂದ ಕೋಪದಿ ಒದ್ದೆ ನೊಸಲಿನ ನಯನವ ॥೧೩೦॥

ನೊಸಲ ನಯನದ ಉರಿವ ಜ್ವಾಲೆಗೆ ಸುಟ್ಟ ಮನ್ಮಥ ಹರ್ಷದಿ
ತನ್ನ ಸುಟ್ಟಿಹ ಕಣ್ಗೆ ಬಿದ್ದಿಹ ಪೆಟ್ಟ ಕಾಣುತ ಮಂದದಲಿ
ನಗುತಲಿರುವನೊ ಎಂಬ ತೆರದಲಿ ನಿನ್ನ ಚರಣಕೆ ಕಟ್ಟಿಹ
ಸ್ವರ್ಣ ಕಾಲಂದಿಗೆಯಂ ಕಿಲಕಿಲ ಮಧುರ ನಾದವ ಗೈದಿತಂ ॥೧೩೧॥

೮೭ ಜಗದಿ ನಿನ್ನಯ ಚರಣಕಮಲಕೆ ಸಾಮ್ಯವಾವುದಂ ಇಲ್ಲವು
ನಿನ್ನ ಪಾವನ ಚರಣ ಕಮಲಕೆ– ಕಮಲ ಹೋಲಿಪೆನೆಂದರೆ
ಗುಣದಿ ಸೌಂದರ್ಯದಲಿ ಸಾಮ್ಯವನೊಂದು ಕಾಣೆನು ಕಮಲದಿ
ಮಂಜು ಸುರಿಯಲು ಚೆಲುವ ಕಮಲವು ಮ್ಲಾನವಾಗುತ–
ಸೊಗಸದು ॥೧೩೨॥

Sri Vidyabharathi Book Centre, Sringeri

CC-O. In Public Domain. Digitized by eGangotri

ದಿನವು ನಿನ್ನಯಂ ಪಾದಯುಗ್ಮವು ಮುಂಜುಬೆಟ್ಟದಿ ಚರಿಪವು
ರಾತ್ರಿಸಮಯದಿ ಕಮಲ ಬಾಡುತ ಮುಚ್ಚಿಕೊಳ್ವುದಂ
ಮುಖವನಂ
ನಿಶೆಯಂ ಸಮಯದಿ ನಿನ್ನ ಚರಣವು ಬೆಳಗುತಿರುವುದು ಪ್ರಭೆಯಲಿ
ಹಗಲುಂ ಮಾತ್ರವು ಕಮಲ ಲಕ್ಷ್ಮಿಗೆ ವಾಸಸ್ಥಾನವು ಇರವುದಂ ॥೧೩೩॥

ನಿನ್ನ ಪಾದವು ಹಗಲುಂ ರಾತ್ರಿಯುಂ ಲಕ್ಷ್ಮಿದೇವಿಯಂ ಸುಂದರ
ಸುಖದ ವಾಸಸ್ಥಾನವಿರುವುದುಂ ತಾಯೆ ಪಾರ್ವತಿ ದೇವಿಯೆ
ನಿನ್ನ ಚರಣವು ಪಾಪ ಕಳೆಯುಂತ ಭವದ ಕಷ್ಟವ ನಶಿಸುಂತ
ವಿದ್ಯೆ ಐಸಿರಿ ಸುಖವನೀಯುಂತ ಎಮ್ಮ ಪೊರೆವುದುಂ ಕರುಣದಿ ॥೧೩೪॥

೮೮ ನಿನ್ನ ಚರಣವು ಕಷ್ಟ ಕಳೆಯುಂತ ಯಶವ ಕೀರ್ತಿಯಂ ನೀವುದುಂ
ಎಂತುಂ ಕವಿಗಳುಂ ಹೊಗಳಿ ಆಮೆಯಂ ಕಠಿಣವಾಗಿಹ ಕರಟಕೆ
ಎಂತುಂ ಸಾಮ್ಯವ ನಿತ್ತು ಪೊಗಳ್ದರು ಮತ್ತೆ ಧೂರ್ಜಟಿ ಲಗ್ನದಿ
ನಿನ್ನನಿತ್ತುತ ಚರಣ ಕಮಲಗಳೆಂತುಂ ಇಟ್ಟನುಂ ಕಲ್ಲಲಿ ॥೧೩೫॥

೮೯ ದೀನ ಜನಗಳುಂ ದೈನ್ಯದಿಂದಲಿ ನಿನ್ನ ಬೇಡುತಲಿರುತಿರೆ
ನಿನ್ನ ಕರಗಳುಂ ಸಕಲ ಇಷ್ಟಾರ್ಥವನುಂ ಕೊಡುವವು ದೇವಿಯೆ
ಕಲ್ಪವೃಕ್ಷದ ಸುಖವ ಪಡೆಯುವ ಅಮರ ಸ್ತ್ರೀಯರುಂ ನವಿಲುಸಲುಂ
ಕಲ್ಪವೃಕ್ಷವ ನಾಚಿಸುತ್ತಿದೆ ಅವರ ನಖಿಗಳ ಕಾಂತಿಯುಂ ॥೧೩೬॥

೯೦ ದೀನ ಜನರಿಗೆ ಸಕಲ ಇಷ್ಟವನಿತ್ತು ಸೌಂದರ್ಯಂಬುವ
ಸರಸ ಮಕರಂದವನುಂ ಎರಚುತ ಕಲ್ಪವೃಕ್ಷದ ಸೊಗಯಿಪ
ಹೂವ ಗೊಂಚಲಿನಂತೆ ಹೊಳೆಯುವ ನಿನ್ನ ಪಾದದ ಕಮಲದಿ
ಎನ್ನ ಜೀವದಭೃಂಗ ಮುಳುಗುತ ಸತತ ರಮಿಸಲಿ ತಾಯಿಯೇ ॥೧೩೭॥

೯೧ ಚೆಲುವ ನಡುಗೆಯಂ ಬೆಡಗವಾತೆಯಂ ನೀನುಂ ಗೃಹದೊಳುಂ ಸಾಕಿಹ
ಹಂಸಪಕ್ಷಿಯಂ ನಿಕರ ನಿನ್ನಯಂ ತೆರದಿ ನಡೆಯುವ ತವಕದಿ
ತಪ್ಪ ಹೆಜ್ಜೆಯನಿಡುತ– ನಿನ್ನಯಂ ಬೆನ್ನ ಹಿಂದಕೆ ನಡೆವವು
ನಿನ್ನ ಕಾಲಿನ ನಖ್ಜಣಾಮಣಿ ಕಾಂತಿಯಂ ತಾನೀರ್ಪುದಂ ॥೧೩೮॥
CC-O. In Public Domain. Digitized by eGangotri

CC-O. In Public Domain. Digitized by eGangotri

೯೨ ಬ್ರಹ್ಮ ವಿಷ್ಣುವು ರುದ್ರ ಈಶ್ವರ ಇವರು ನಾಲ್ವರು ಶ್ರೇಷ್ಠರು
ದಿನವು ನಿನ್ನಯ ಸೇವೆ ಮಾಡುತ ಧನ್ಯನಾಗಲು ಬಯಸುತ
ನಿನ್ನ ಮಂಚದ ನಾಲ್ಕು ಕಾಲುಗಳಾಗಿ ನಿಲ್ಲುತ ದೃಢದಲಿ
ನಿನ್ನ ಸೇವೆಯ ಮಾಡುತಿರುವರು ಹಗಲು ರಾತ್ರಿಯು ಸತತವು ॥೧೩೯॥

ಹರನು ಶುಭ್ರದ ಕಾಂತಿ ನಿಪದಲಿ ನಿನ್ನ ತನುವನು ವ್ಯಾಪಿಸಿ
ಹೊದ್ದಿಕೊಳ್ಳುವ, ಬಿಳಿಯ ದುಪ್ಪಟಿಯಂತೆ– ಕಾಣುತ
ಸೊಗಸುತ
ಕೆಂಪುವರ್ಣದ ನಿನ್ನ ದೇಹದ ಬಣ್ಣದಿಂದಲಿ ಲೇಪಿಸಿ
ಕೆಂಪಗಾಗುತ ರೂಪಪೆತ್ತಿಹ ಶೃಂಗಾರ ರಸದಂತೆಸೆವನು ॥೧೪೦॥

೯೩ ದೇವದೇವನ ಹರನ ಕರುಣೆಯು ಲೋಕ ರಕ್ಷಣೆಗೈಯ್ಯಲು
ದಯೆಯು ರೂಪನ ತಾಳ್ದಿ ವಕ್ರದಿ ಕೇಶಪಾಶದಿ ಸೊಗಯಿಸಿ
ಸಹಜ ಸುಮಧುರ ಮಂದಹಾಸದಿ ಎಸೆವ ಶಿರೀಷ ಕುಸುಮದ
ಪರಿಯೆ ಕೋಮಲ ಚಿತ್ತವೃತ್ತಿಯು ಕರೂಣಪೂರಿತ
ಹೃದಯದಿ ॥೧೪೧॥

ಶಿಲೆಯು ತೆರದಲಿ ಕಠಿಣವಾಗಿಹ ವೃತ್ತ ಕುಚಗಳ ಸೊಬಗಲಿ
ಸಣ್ಣ ನಡುವಿನ ಚೆಲುವಿನಿಂದಲಿ ವಿತತ ಕುಚಮಂಡಲದಲಿ
ವರ ನಿತಂಬದಿ ಅಡಿಯನಿಡುತಲಿ ಕೆಂಪು ವರ್ಣದ ತನುವಿನ
ಪರಮ ಮಹಿಮಾನ್ವಿತೆಯು ಲಲನೆಯು ರೂಪದಿಂದಲಿ
ಮೆರೆವುದು ॥೧೪೨॥

೯೪ ಅತುಳ ತೇಜದಿ ಹೊಳೆವ ವೃತ್ತದ ಚೆಲುವ ವಸ್ತುವ
ನೋಡುತ
ಮರುಳು ಜನಗಳು ಚಂದ್ರ ಬಿಂಬವು ಮುತ್ತೆ ಮದ್ಯದಿ ಕಾಣುವ
ಕಪ್ಪುಬಣ್ಣವ ಅದು ಕಳಂಕವು ಎಂದು ಮೌಢ್ಯದಿ ನುಡಿವರು
ಇದರ ಗುಟ್ಟನ್ನು ಅರುಹಿಯುದ್ದ ವಿವಿಧ ಪರಿಯಲಿ ಪೇಳ್ವರು ॥೧೪೩॥

Sri Vidyabharathi Book Centre, Sringeri

CC-O. In Public Domain. Digitized by eGangotri

ಬ್ರಹ್ಮದೇವನು ದಿವ್ಯ ಮಂರಕತ ರತ್ನ ಕರಡಿಗ ವಹಾಡಂತ
ಪಚ್ಚೆ ಕರ್ಪುರ ಮಂತ್ತೆ ಕಸ್ತೂರಿಗಳ ತುಂಬುತ ಕೊಟ್ಟಿಹ
ನೀನು ಪ್ರತಿದಿನ ಹಚ್ಚಿ ಕೊಳ್ಳುತ ಬರಿದುವಹಾಡಲು ಕರಡಿಗೆ
ಮಂತ್ತೆ ಪರಿಮಳ ದ್ರವ್ಯದಿಂದಲಿ ತುಂಬಿ ಬಿಡುವನು ಬ್ರಹ್ಮನು ॥೧೪೪॥

೯೫ ಹರನ ಪಟ್ಟದ ರಾಣಿ ನೀನಿಹೆ, ಹೀನ ಚಂಚಲ ಚಿತ್ತದ
ಸುರರು ನರರಿಗೆ ನಿನ್ನ ಪಾದದ ಪೂಜೆ ದುರ್ಲಭವಾಗಿದೆ
ಅಶ್ವಮೇಧವ ನೂರುಗೈದಿಹ ಇಂದ್ರದಿವಿಜರು ದ್ವಾರದಿ
ಇರುವ ಅಣಿಮಹಾದಿಗಳ ಸಿದ್ಧಿಯು ಪಡೆದು ತೋಷದಿ ತೆರಳ್ವರು ॥೧೪೫॥

೯೬ ಅಜನ ಪಟ್ಟದ ರಾಣಿ ವಾಣಿಯು ವರವ ಪಡೆಯುಂತ ಜನಗಳು
ಶ್ರೇಷ್ಠವಾಣೀ ಪತಿಯು ಎನ್ನುತ ಖ್ಯಾತಿ ಯುಂಶವನು ಪಡೆದರು
ಹರನ ಒಲುಮೆಯ ಅರಸಿ ಲಕ್ಷ್ಮೀದೇವಿಯುವಳನು ಪೂಜಿಸಿ
ಸ್ವಲಬ್ಧ ಧನವನು ಗಳಿಸಿ ಲಕ್ಷ್ಮೀಪತಿಯು ಎನ್ನಿಸಿಕೊಂಡರು ॥೧೪೬॥

ವರಪತಿವ್ರತೆಯುರೊಳು ಶ್ರೇಷ್ಠಳು ಪ್ರಥಮು ಸಾಧ್ವಿಯುು
ಎನಿಸುವ
ನಿನ್ನ ವಿಷಯುವು ಬೇರೆ ಇರುವುದು ನಿನ್ನ ಕುಚಸಂಸರ್ಗವು
ಶಿವನ ಬಿಟ್ಟರೆ ಆ ಅಚೇತನವಹಾದಗೋರಟಿ ತರುವಿಗೂ
ಸಿಗದೆ ದುರ್ಲಭವಾಗಿ ಇರುವದು ಶೀಲೆ ಸುಂಚರಿತೆ ನೀನಿಹೆ ॥೧೪೭॥

೯೭ ಬ್ರಹ್ಮನೆನಿಸಿದ ಶಿವನ ಪಟ್ಟದ ರಾಣಿ ದೇವಿಯೆು ಪಾರ್ವತಿ
ವೇದಸಾರವನರಿತ ನಿಪುಣರು ನೀನು ಬ್ರಹ್ಮನ ಒಲುಮೆಯು
ಪ್ರೇಮದರಸಿಯುು ಪುಣ್ಯ ಶಾರದೆ ಮಂತ್ತೆ ವಿಷ್ಣುವ ದೇವನ
ನಾಭಿ ಮಧ್ಯದಿ ವಾಸವಹಾಡುವ ಲಕ್ಷ್ಮೀದೇವಿಯುು ಎಂಬರು ॥೧೪೮॥

ಪುಣ್ಯ ವರಕೈಲಾಸ ಶಿಖರದಿ ಶಿವನ ಜೊತೆಯುಲಿ ಇರುತಿಹ
ದೇವಿ ಪಾರ್ವತಿ ಎಂದು ಪೇಳ್ವರು ನೀನು ಮೂವರಕಿಂತಲೂ
ಭಿನ್ನಳಾಗಿಹೆ ನೀನು ವರ್ಣಿಸಲಾಗದಂತಹ ತಿಳಿಯುದ
ಅತುಳ ಶಕ್ತಿಯು ಮಹಾವಭಾಯೆುಯುು ಮೋಹಗೊಳಿಸುವೆ
Sri Vidyabharathi Book Centre, Sringeri
ವಿಶ್ವವ ॥೧೪೯॥

CC-O. In Public Domain. Digitized by eGangotri

೯೮ ಬ್ರಹ್ಮವಿದ್ಯೆಯಂ ಆರಿಯಲೋಸುಗ ನಾನಂ ಆಶಿಸುತಿರುವೆನಂ
ಕೆಂಪು ಲಾಕ್ಷಾರಸದಿ ಶೋಭಿಪ ನಿನ್ನ ಪಾದದ ತೀರ್ಥವ
ಎಂದಂ ಮನದಣಿ ಕಂಡಿದಂ ಹರ್ಷದಿ ಜನ್ಮ ಸಾರ್ಥಕ ಎನಿಪುದೊ
ಪುಣ್ಯ ಗಂಗೆಯಂ ಜಲದ ತೆರದಲಿ ಎನಗೆ ವಂಂಕ್ತಿಯಂ ನೀವುದೊ ॥೧೫೦॥

ನಿನ್ನ ಪಾದೋದಕವು ಮೂಕನ ಕವಿವರೇಣ್ಯನ ಮಾಳ್ಪದಂ
ನಿನ್ನ ಪಾದದ ತೀರ್ಥ ಪಾವನ ಪುಣ್ಯ ವಾಣಿಯಂ ಮುಂಖಿದಲಿ
ಇರುವ ಗಂದದ ದಿವ್ಯ ತಾಂಬೂಲಂತೆ ಹರ್ಷವ ಸಂಖಿವನಂ
ಎಂದುಂ ಈವುದೊ ನಾನಂ ಎಂದಿಗೆ ಧನ್ಯನಾಗುವೆ ತಿಳಿಯೆಂನಂ ॥೧೫೧॥

೯೯ ನಿನ್ನ ಭಜಿಸುತ ನಿನ್ನ ಕೃಪೆಯಲಿ ವಾಣಿ ಲಕ್ಷ್ಮಿಯಂ ಈರ್ವರ
ವರಸಿಕೊಳ್ಳುತ ವಿದ್ಯೆ ಐಸಿರಿ ಎರಡುಂ ಪಡೆಯುತ ಸುಖದಲಿ
ಬ್ರಹ್ಮ ವಿಷ್ಣುವಿಗಿಂತ ಶ್ರೇಷ್ಠರುಂ ಎನಿಸಿ ಜಗದಲಿ ಮೆರೆವರುಂ
ಅದರ ಹಾಗೆಯೆ ಜೀವ ಮಾಯೆಯಂ ಆ ಅವಿದ್ಯೆಯಂ ಜಾಡ್ಯವ ॥೧೫೨॥

ಕಳೆದುಂಕೊಳ್ಳುತ ಶುದ್ಧ ಚೈತನ್ಯದಲಿ ತೊಳಗುತ ಬೆಳಗುತ
ವಿಪುಳ ಕಾಲವು ಜಗದೊಳಿರುತಲಿ ಬ್ರಹ್ಮ ಸಾಕ್ಷಾತ್ಕಾರವ
ಪಡೆದುಂ ಬ್ರಹ್ಮಾನಂದರಸವನುಂ ಕಂಡಿದುಂ ತಣಿಯುಂತ ಹರುಷದಿ
ಲೀನನಾಗುತ ತಾನೆ ತಾನಾಗುತಲಿ ತನ್ನಲಿ ಮೆರೆವನಂ ॥೧೫೩॥

ನಿನ್ನ ಕೃಪೆಯಲಿ ಸ್ಫೂರ್ತಿಯಿಂದಲಿ ಬಂದ ನುಡಿಯಲಿ ಪೊಗಳುವೆ
ಇದುವೆ ನೀರಾಜನದಿ ಸೂರ್ಯಗೆ ಎತ್ತಿದಾರತಿ ಯಂತಿದೆ
ಚಂದ್ರಕಾಂತಿಯಂ ಶಿಲೆಯಂ ಜಲವನುಂ ಚಂದ್ರ ಗರ್ಜಿಸಿದಂತಿದೆ
ಕಡಲ ಜಲವನುಂ ಕಡಲಿಗರ್ಪಿಸಿದಂತೆ ಇರುವುದುಂ ತಾಯಿಯೆಂ ॥೧೫೪॥

ಆದಿ ಶಂಕರ ಗುರುವರೇಣ್ಯರು ರಚನೆಗೈದಿಹ ಸುಮಂಧುರ
ಸರಸ ವರ ಸೌಂದರ್ಯಲಹರಿಯಂ ಆದಿ ಶಕ್ತಿಯ ಸ್ತೋತ್ರವ
ಸುಕವಿ ಲಕ್ಷ್ಮಣ ಜೋಶಿ ಕನ್ನಡ ಲಲಿತಕಾವ್ಯದ ಬಂಧದಿ
ರಚನೆಗೈದಿಹ ಸಕಲ ವಿದ್ವಜ್ಜನರು ಹೊಗಳಲು ಹರ್ಷದಿ ॥೧೫೫॥

ಸೌಂದರ್ಯ ಲಹರೀ ಸಮಾಪ್ತಮಾದುದು

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಮತ್ ಶಂಕರಾಚಾರ್ಯ ವಿರಚಿತ
ಚರ್ಪಟ ಮಂಜರಿಯ ಸ್ತೋತ್ರವು

॥ ಭಜಗೋವಿಂದಂ ॥

(ಕನ್ನಡ ಪದ್ಯಾನುವಾದ)

ನೆನೆ ಗೋವಿಂದನ ನೆನೆ ಗೋವಿಂದನ ನೆನೆ ಗೋವಿಂದನ ಮೂಢವಂತೆ ।
ಮರಣವು ಬಂದಿರೆ ಹರಣವ ಕಾಯದು ನಿನ್ನಯ ವ್ಯಾಕರಣ ॥
ಹಗಲೂ ಇರುಳೂ ಬೆಳಗೂ ಬೈಗೂ ಮಾಗಿಯು ಸುಗ್ಗಿಯು ತೆರಳುತಿವೆ ।
ಕಾಲನ ಜಾಲದಿ ಜೀವನ ಸಾಗಿದೆ ಆದರು ಆಶೆಯು ತೀರದಿದೆ ॥೧॥

ಮುಂದಕೆ ಅಗ್ನಿಯು ಹಿಂದಕೆ ಸೂರ್ಯನು ಚಳಿಯಂಲಿ ಗಡಗಡ
ನಡುಗುವುದು ।
ಕರದಲಿ ಭಿಕ್ಷೆಯು ಮರದಡಿ ವಾಸವು ಆದರೂ ಆಶೆಯು ಹರಿಯದಿದೆ ॥೨॥

ಎಲ್ಲಿಯವರೆಗೂ ಧನವನು ತರುವೆಯೊ ಅಲ್ಲಿಯವರೆಗೂ ಪ್ರೀತಿಪರು ।
ಧನವೂ ತೀರಲು ಮುಪ್ಪಿನ ಕಾಲದಿ ಕೇಳರು ನಿನ್ನಯ ಕುಶಲವನು ॥೩॥

ತಲೆಯನು ಬೋಳಿಸಿ ಕಾವಿಯ ಧರಿಸುತ ಭಿಕ್ಷೆಯ ವೇಷದಿ ಮೋಸದಲಿ ।
ಹೊಟ್ಟೆಯ ಪಾಡಿಗೆ ಅಲೆವರ ಕಂಡರು ಭಜಿಸರು ದೇವ ಮುರಾರಿಯನು ॥೪॥

ಅವನು ಕಿಂಚಿತ್ ಗೀತೆಯನೋದುವ ಗಂಗೆಯ ಹನಿಯನು
ಕುಡಿಯುವನೊ ।
ಅವನು ಶ್ರೀಪತಿಯೊಮ್ಮೆಯು ಅರ್ಚಿಪ ಅವನನು ಯುವನೂ ಚರ್ಚಿಸನು ॥೫॥

ಕುಂಠಿತ ದೇಹದಿ ಬೆಳ್ಳಗೆ ತಲೆಯಲಿ ಹಲ್ಲುಗಳುದುರಿದ ಬಾಯಿಯಲಿ ।
ಕೋಲನ್ನೂರುತ– ಬಾಗುತ ನಡೆದರೂ ಮುದುಕನ ಆಶೆಯು
ಮಾಗಿಯದಿದೆ ॥೬॥

ಬಾಲ್ಯದಿ ಆಟದಿ ಆಸೆಯ ತಳೆಯುವ ಹರೆಯಲಿ ತರುಣಿಯಲಿ ।
ಮುಪ್ಪಿನಕಾಲದಿ ಚಿಂತಾಕ್ರಾಂತನು ಯಾರೂ ನೆನೆಯರು ಬ್ರಹ್ಮನನು ॥೭॥

Sri Vidyabharathi Book Centre, Sirsi

CC-O. In Public Domain. Digitized by eGangotri

ಮತ್ತೆಯುಂ ಜನನವು ಮಂತ್ತೆಯುಂ ಮರಣವು ಮತ್ತೆಯುಂ ಜನಿಪುದುಂ
ಜನನಿಯಂಲಿ ।
ಈ ಸಂಸಾರವು ಬಹುದುಸ್ತಾರವು ಭಜಿಪುದು ಸತತ ಮುರಾರಿಯನುಂ ॥೮॥

ರಾತ್ರಿಯುಂ ಕಳೆಯುತ ದಿವಸವು ಉರುಳುತ- ಪಕ್ಷವು ತಿಂಗಳುಂ ತೆರಳುತಿವೆ ।
ಮತ್ತೆಯುಂ ಅಯನವು ವರ್ಷವು ಕಳೆದರೂ ಆಶೆಯುಂ ಈರ್ಷೆಯುಂ
ಮುಗಿಯದಿದೆ ॥೯॥

ಪ್ರಾಯುವು ಕಳೆಯಲುಂ ಎಲ್ಲಿಯು ಕಾವುವು ಬತ್ತಿದ ಬರಿಕೊಳವು ।
ದ್ರವ್ಯವು ಅಳಿಯಲುಂ ಎಲ್ಲಿಯು ಬಳಗವು "ಅರಿಯಲು" ಆ ಮುಂಕ್ಕ ॥೧೦॥

ನಾರಿಯು ದೇಹವ ನೋಡುತ ಮೂಢನೆ ಮೋಹವಗೊಳ್ಳದಿರುಂ ।
ಭಾರಿಯು ಮಾಂಸದ ಮುದ್ದೆಯು ರೂಪವು ಯೋಚಿಸು ಮನದಲಿ
ಬುದ್ಧಿಯಂಲಿ ॥೧೧॥

ನಾನಾರಿರುಂವೆನುಂ ಎಲ್ಲುಂ ಬಂದೆನುಂ ತಂದೆಯುಂ ತಾಯಿಯುಂ ಆರಿಹರು ।
ಈ ಸಂಸಾರವು ಕ್ಷಣದಲಿ ನಶಿಪುದುಂ ಕನಸಿದುಂ ಎಂಬುದ ತಿಳಿಯುುವುದುಂ ॥೧೨॥

ಗೀತೆಯನೋದುತ ಸಾಸಿರ ನಾಮುದಿ ಶ್ರೀಪತಿ ರೂಪವ ನೆನೆಯುುವದುಂ ।
ಧನವನುಂ ದೀನರಿಗೀಯುುತ ಮನವನುಂ ಸಜ್ಜನಸಂಗದಿ ತಣಿಸುವುದುಂ ॥೧೩॥

ದೇಹದಿ ಉಸಿರೂ ಆಡುವವರೆಗೂ ಎಲ್ಲರುಂ ಕ್ಷೇಮವ ಕೇಳುವರುಂ ।
ಉಸಿರೂ ಕಳೆಯಲು ಸತಿಯೂ ಅಂಜುವಳಿತನ ಭೀಕರ ದೇಹದಲಿ ॥೧೪॥

ವಿಷಯವ ಭೋಗಿಸಿ ನಾನಾ ರೋಗದಿ ದೇಹದಿ ನರಳುತ ಕೊನೆಯಲ್ಲಿ ।
ಮರಣವು ತಪ್ಪೆದುಂ ಎಂದೂ ಅರಿತರೂ ಪಾಪವ ತ್ಯಜಿಸರು ಮಾನವರುಂ ॥೧೫॥

ಪಾಪದ ಪುಣ್ಯದ ಚಿಂತೆಯು ಮಾಡದೆ ಚಿಂದಿಯು ಬಟ್ಟೆಯು ಧರಿಸುತಲಿ ।
ನಾನೂ ನೀನೂ ಜಗವಿದು ಮಿಥ್ಯೆಯುು ಎನ್ನುವಗೆಲ್ಲಿದೆ ದುಃಖಿದುರಿ ॥೧೬॥

Sri Vidyabharathi Book Centre, Sringeri

CC-O. In Public Domain. Digitized by eGangotri

ಯೋಗಿಯು ಮನವನು ಯೋಗದೊಳಿರಿಸುತ ಬಾಹ್ಯದ ವಿಶ್ವವ
ಮರೆಯಂತಲಿ ।
ಬಾಲಕರಂತೆಯೆ ತನ್ನೊಳು ತಾನೇ ಬ್ರಹ್ಮಾನಂದದಿ ರವಿಸುವನು ॥೧೭॥

ಗಂಗಾಯಾತ್ರೆಯು ವಿಧವಿಧ ವ್ರತಗಳ ದಾನವ ಮನುಜನು ಮಾಡಿದರೂ ।
ಜ್ಞಾನವು ಇಲ್ಲದೆ ಸಾವಿರ ಜನ್ಮದಿ ಮುಕ್ತಿಯು ದೊರೆಯದು
ಅರಿಯುವುದು ॥೧೮॥

ಜಗದಲಿ ನಿಪುಣರು ಶ್ರೀಮತ್ ಶಂಕರ ರಚಿಸಿಹ ಚರ್ಪಟ ಮಂಜರಿಯ ।
ಕನ್ನಡ ಕಾವ್ಯದಿ ಲಕ್ಷ್ಮಣನುಲಿದನು ಶಂಕರ ಕೃಪೆಯುಲಿ ಕರುಣೆಯಲಿ ॥೧೯॥

ಶ್ರೀಚರ್ಪಟ ಮಂಜರಿ ಸಮಾಪ್ತವಾದುದು

CC-O. In Public Domain. Digitized by eGangotri

ಶ್ರೀಮತ್ ಶಂಕರಾಚಾರ್ಯ ವಿರಚಿತ
ದ್ವಾದಶ ಮಂಜರಿ

(ಕನ್ನಡ ಪದ್ಯಾನುವಾದ)

ಬಿಡಂ ಬಿಡಂ ದ್ರವ್ಯದ ಆಶೆಯಂ ಮೂಢನೆ ಧನವನಂ ಸಂಗ್ರಹ
ಮಾಡದಿರಂ ।
ಸಾವಿರ ಗಳಿಸಲಂ ಕೋಟಿಯಂ ಗಳಿಸುವ ಅತಿವ್ಯಾಮೋಹವ
ತ್ಯಜಿಸುವದಂ ।
ನಿತ್ಯವು ನಿನ್ನಯ ದುಡಿತದಿ ಶ್ರಮದಲಿ ದೊರೆತಿಹ ದ್ರವ್ಯದಿ ಧಾನ್ಯದಲಿ ।
ತೃಪ್ತಿಯಂ ಪಡೆಯುತ ಸಂತಸದಿಂದಲಿ ಮನವನಂ ಸುಖದಲಿ
ರಮಿಸುವುದು ॥೧॥

ದ್ರವ್ಯವು ದೊರೆಯಲಂ ವಿಧವಿಧ ವಿಷಯವ ಭೋಗಿಪ ಆಶೆಯಂ
ಮಾಡುತಲಿ ।
ತೀರದ ಆಶಾಪಾಶದಿ ಮಂಳುಗುತ ನಾಶವ ಹೊಂದುವೆ ಸತ್ಯವಿದಂ ।
ಧನಿಕಗೆ ಹೆಂಡತಿ ಮಕ್ಕಳ ಭೀತಿಯು ಭಾಂಧವರ್ಗದ ದ್ವೇಷವಿದೆ ।
ಕಳ್ಳರ ಕಾಕರ ದುಷ್ಟರ ಭಯವಿದೆ ಎಲ್ಲೆಡೆ ಭೀತಿಯಂ ಮನುತ್ತಿಹುದಂ ॥೨॥

ತಂದೆಯಂ ತಾಯಿಯಂ ಪತ್ನಿಯಂ ಪುತ್ರರಂ ಬಂಧುಗಳೆಲ್ಲರಂ ಆರಿಹರಂ ।
ಎಲ್ಲಿಂ ಬಂದಿಹೆ ಏತಕೆ ಬಂದಿಹೆ ಕಾರ್ಯವು ಏನಿಹುದಂ ।
ಕೊನೆಯಂಲಿ ಎಲ್ಲಿಗೆ ತೆರಳುವೆ ತಮ್ಮನೆ ಮನದಲಿ ಎಲ್ಲವ ಯೋಚಿಪುದಂ ।
ಈ ಸಂಸಾರವು ಸೋಜಿಗವಾದುದಂ ಸ್ವಪ್ನ ವಿದೆಂಬುದ ಅರಿಯುವುದು ॥೩॥

ನಿನ್ನಯ ಬಳಿಯಲಿ ದ್ರವ್ಯವು ಬಹಳಿದೆ ಬಂಧುವು ಮಿತ್ರರು ಬಹಳಿಹರು ।
ಎನ್ನುತ ಗರ್ವವ ಮಾಡಿದರೆಂದಿಗು ಕಾಲನು ನಿಮಿಷದಿ ನಶಿಸುವನು ।
ಕೊನೆಯಂಲಿ ಎಲ್ಲವ ಇಲ್ಲಿಯೆ ಬಿಡುತಲಿ ತೆರಳುವ ಈ ಸಂಸಾರವನಂ ।
ಮಾಯಾಮಯವಿದೆ ಎಂಬುದ ತಿಳಿಯುತ ಬ್ರಹ್ಮನನರಿಯುತ
ಸುಖಿಸುವುದಂ ॥೪॥

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಮಂಕ್ರೋಧವ ಲೋಭವ ಮೋಹವ ಎಲ್ಲವ ತ್ಯಜಿಸುತ ಶಾಂತಿಯಲಿ ।
ನಾನಾರಿರುವೆನು ಎಂಬುದ ನಿನ್ನಯ ಆತ್ಮದಿ ಯೋಚಿಸಿ ತಿಳಿಯುವುದು ।
ಆತ್ಮಜ್ಞಾನವನರಿಯದ ಮೂರ್ಖರು ತಮ್ಮನು ತಾವೇ ಅರಿಯದಲೆ ।
ನರಕದಿ ಬೀಳುತ ವಿಧವಿಧ ಕಷ್ಟವ ಸಹಿಸುತ ಕಾಲವ ಕಳೆಯುವರು ॥೫॥

ಗುಡಿಯಲಿ ಗಿಡದಡಿ ವಾಸವ ಮಾಳ್ಪದು ಭೂಮಿಯ ಮೇಲಕೆ
ಮಲಗುವುದು ।
ಚರ್ಮಾಂಬರವನು ಧರಿಸುತಲಿರುವುದು ಆಶೆಯನ್ನೆಲ್ಲವ
ತೊರೆಯುವುದು ।
ಜಗದೊಳು ಕಾಣುವ ಎಲ್ಲ ಸುಖಿಂಗಳ ಭೋಗಿಪ ಮೋಹವ ತ್ಯಜಿಸುತಲಿ ।
ವಿರಾಗಿಯ ಭಾವದೊಳಿರುವುದು ಅರಿಗೆ ಸುಖವನ್ನೀಯದು ಪೇಳುವುದು ॥೬॥

ಬ್ರಹ್ಮಾನಂದವ ಪಡೆಯುವ ಆಶೆಯು ಬಲವಾಗಿರ್ದೊಡೆ ಮನದಲ್ಲಿ ।
ಶತ್ರುಗಳೊಡನೆಯು ಪುತ್ರರ ಜೊತೆಯಲಿ ಮಿತ್ರರು ಬಾಂಧವ ವರ್ಗದಲಿ ।
ಆವುದು ಪ್ರೀತಿಯ ಕಲಹವ ಮಾಡದೆ ಚಿತ್ತವ ಸಮತೆಯೊಳಿರಿಸುತಲಿ।
ಸುಖದಲಿ ದುಃಖದಿ ಸುಖಿಸದೆ ನೋಯದೆ ಒಂದೇ ಭಾವವ ತಾಳುವುದು ॥೭॥

ನಿನ್ನಲಿ ನನ್ನಲಿ ಬೇರೆಯವರಲಿ ಒಬ್ಬನೆ ದೇವನು ವಾಸಿಪನು ।
ಸುಮ್ಮನೆ ಏತಕೆ ಎನ್ನನು ನಿಂದಿಪೆ ಆ ಪರಮಾತ್ಮನ ಅರಿಯದಲೆ ।
ಜಗದೊಳು ಎಲ್ಲೆಡೆ ಪಶು–ಪಕ್ಷಿಗಳು ಜೀವದ ರಾಶಿಯು ಕೋಟಿಯಲಿ !
ಒಬ್ಬನೆ ಆತ್ಮನು ಬೆಳಗುತಲಿರುವನು ಭೇದದ ಭಾವವ ಮಾಡದಿರು ॥೮॥

ಪ್ರಾಣಾಯಾಮವ ನಿತ್ಯವು ಮಾಡುತ ಇಂದ್ರಿಯ ಸಕಲವ ನಿಗ್ರಹಿಸಿ ।
ಶಾಶ್ವತವಾವುದು ನಶ್ವರವಾವುದು ಅಂತರ್ಮುಖದಲಿ ಯೋಚಿಪುದು ।
ದೇವನ ನೆನೆಯುತ ಏಕಾಗ್ರತೆಯಲಿ ಚಿತ್ತವ ನಿಶ್ಚಲ ಗೊಳಿಸುತಿರೆ ।
ಮನದಲಿ ಶಾಶ್ವತ ಶಾಂತಿಯು ನೆಲಸುತ ಬ್ರಹ್ಮಾನಂದವ ಪಡೆಯುವುದು ॥೯॥

ಕಮಲದ ಪತ್ರದ ಮೇಲಿಹ ನೀರಿನ ತೆರದಲಿ ಜೀವನ ಅಸ್ಥಿರವು ।
ವಿಧ ವಿಧ ರೋಗದಿ ದುರಹಂಕಾರದಿ ಲೋಕವು ವ್ಯಾಕುಲವಾಗಿಹುದು ।
ಜಗದೊಳು ವಿಧವಿಧ ಕಷ್ಟದಿ ನರಳುವ ನರರನು ನೋಡುತ ಯೋಚಿಸುತ ।
ಶಾಶ್ವತ ಸುಖವನ್ನೀಯುವ ದೇವನ ಎಂದಿಗು ನೆನೆವುದುಮೊರೆಯಿಡುತ ॥೧೦॥

Sri Vidyabharathi Book Centre, Sringeri

CC-O. In Public Domain. Digitized by eGangotri

ಗಾಳಿಯಂ ತೆರದಲಿ ಚಂಚಲನಾಗಿಹ ಹುಲ್ಲಿನ ಪರಿಇಹ ಮಾನವನೆ ।
ನಿನ್ನಯಂ ವಿತ್ತಿಗೆ ಪುತ್ರಗೆ ಆಸ್ತಿಗೆ ಸಂಮ್ಮನೆ ಏತಕೆ ಚಿಂತಿಸುವೆ ।
ನಿನ್ನನುಂ ಧೃಢದಲಿ ಕೈಯಲಿ ಹಿಡಿದಿಹ ಜನನಕೆ ಮರಣಕೆ ಸಿಲುಕದಿಹ ।
ಸರ್ವವ ತುಂಬಿಹ ಬ್ರಹ್ಮವ ತಿಳುಹುವ ಗುರುಂಗಳುಂ ಇಲ್ಲವೆ ನಿನಗಿಲ್ಲಿ ॥೧೧॥

ಗುರುವಿನ ಚರಣದಿ ಧೃಢದಲಿ ಭಕುತಿಯಂ ಇರಿಸುತ ಮೋಹವ
ತೊರೆಯಂತಲಿ ।
ದುಸ್ತರವಾಗಿಹ ಭವಸಾಗರವನುಂ ದಾಟುಂತ ಮುಂಕ್ತನು ಆಗುಂತಲಿ ।
ಮನಸನುಂ ಇಂದ್ರಿಯಂ ವಶದೊಳುಂ ಇರಿಸುಂತ ಶಾಂತದಿ ಯೋಜನೆ
ಗೈಯ್ಯುತಿರೆ ।
ನಿನ್ನಯಂ ಹೃದಯಾಂಬುಜದೊಳುಂ ನೆಲಸಿಹ ದೇವನ ಕಾಂಬುವಿ
ನಿಶ್ಚಯಂವು ॥೧೨॥

ಶ್ರೀಮತ್ ಶಂಕರ ಭಗವತ್ಪಾದರು ದ್ವಾದಶ ಮಂಜರಿ ಸ್ತೋತ್ರವನುಂ ।
ತವ್ಮಯಂ ಶಿಷ್ಯರಿಗೊರೆದರು ಒಲವಲಿ ಜೀವನ್ಮುಕ್ತಿಯ ಪಡೆಯಲಿಕೆ ।
ಈ ಉಪದೇಶಕೆ ಆವನ ಚಿತ್ತವು ಒಳ್ಪಿಯಂ ಬುದ್ಧಿಯ ತಳೆಯದಿರೆ ।
ಶತಶತ ಜನ್ಮದಿ ನರಕವ ಭೋಗಿಪ ಸತತವು ದೇವನ ನೆನೆಯುಂತಿರು ॥೧೩॥

ಒಳ್ಪಿಯಂ ಸಂಗವ ಮಾಡುಂತಲಿರುಂತಿರೆ ವಿಷಯದ ಮೋಹವು
ಆಳಿಯುಂವುದು ।
ಮೋಹವನೆಲ್ಲವ ತೊರೆಯುಂತಲಿರುಂತಿರೆ ಚಿತ್ತವು ನಿಶ್ಚಲವಾಗುವುದುಂ ।
ಚಿತ್ತವು ಚಲಿಸದೆ ನಿಶ್ಚಲವಾಗಿರೆ ಶಾಂತಿಯುಂ ಮನದಲಿ ನೆಲಸುಂತಿರೆ ।
ಶಾಂತಿಯು ಕಡಲಲಿ ಬ್ರಹ್ಮಾನಂದದಿ ಜೀವನ್ಮುಕ್ತಿಯಂ ಪಡೆಯುಂವುದುಂ ॥೧೪॥

ಆವನ ಚಿತ್ತವು ಬ್ರಹ್ಮಾನಂದದಿ ಸುಖಿದಲಿ ರಮಿಸುತಲಿರುಂತಿಹುದೊ ।
ಸಕಲವ ತ್ಯಜಿಸುಂತ ಜೀವನ್ಮುಕ್ತಿಯ ಯೋಗಿಯ ಸ್ಥಿತಿಯಲಿ ಇರುತಿರಲಿ ।
ನಿಧವಿಧ ವಿಷಯಂವ ಭೋಗಿಸುತಿರಲಿ ಇಲ್ಲವೆ ಎಲ್ಲವ ತೊರೆದಿರಲಿ ।
ಆತನುಂ ಪೂರ್ಣಾನಂದದಿ ಮುಳುಂಗುಂತ ಬ್ರಹ್ಮಾನಂದವ ಸವಿಯುಂವನುಂ ॥೧೫॥

ದ್ವಾದಶ ಪಂಜರಿಕಾ ಸಮಾಪ್ತಮಾದುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಇದೇ ಗ್ರಂಥಕರ್ತರು ರಚಿಸಿರುವ ಬೇರೆ ಗ್ರಂಥಗಳು.

೧) ಕಾವ್ಯರಾವಣಾಯಣ (ಭಾಗ– ೧) ರೂ. ೫–೫೦
(ಬಾಲ ಕಾಂಡ, ಅಯೋಧ್ಯಾ ಕಾಂಡ)

೨) ಕಾವ್ಯ ರಾವಣಾಯಣ (ಭಾಗ– ೨) ರೂ. ೧೫-೦೦
ಅರಣ್ಯ ಕಾಂಡ ಮತ್ತು ಕಿಷ್ಕಿಂಧಾ ಕಾಂಡ

ಈ ಪುಸ್ತಕಗಳು ದೊರೆಯುವ ಸ್ಥಳ :

೧) ಶ್ರೀ ಲಕ್ಷ್ಮಣ ವಿರೂಪಾಕ್ಷ ಜೋಶಿ
ವಾಳವಂಡ್ಡಿ, ಎಮ್ಮೀಕೆರಿ ಸಾಲೆಯ ಹತ್ತಿರ, ಧಾರವಾಡ– ೭

೨) ಭಾರತ ಪ್ರಿಂಟಿಂಗ್ ಪ್ರೆಸ್, ಸ್ಟೇಶನ ರೋಡ,
ಚಂದ್ರಸದನ, ಧಾರವಾಡ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಲೇಖಕರನ್ನು ಕುರಿತು

ಶ್ರೀ ಲಕ್ಷ್ಮಣ ವಿರೂಪಾಕ್ಷ ಜೋಶಿ ಇವರು ಕರ್ನಾಟಕ ರಾಜ್ಯ ಸರ ಕಾರದ ಲೋಕೋಪಯೋಗಿ ಇಲಾಖೆಯಲ್ಲಿ ಸೇವೆ ಸಲ್ಲಿಸಿ ಈಗ ನಿವೃತ್ತರಾಗಿದ್ದಾರೆ. ಇವರು ಕಾವ್ಯರಾಮಾಯಣವೆಂಬ ಗ್ರಂಥವನ್ನು ರಚಿಸಿದ್ದಾರೆ. ಅದು ಬಹಳ ಜನಪ್ರಿಯವಾಗಿದೆ. ಈಗ ಇವರು ಶ್ರೀ ಶಂಕರಾಚಾರ್ಯ ವಿರಚಿತ 'ಸೌಂದರ್ಯ ಲಹರೀ' ಭಜ ಗೋವಿಂದಂ ಮತ್ತು ದ್ವಾದಶ ಪಂಜರಿಕಾ ಸ್ತೋತ್ರಗಳನ್ನು ಕನ್ನಡದಲ್ಲಿ. ಸುಮಧುರ ಕಾವ್ಯ ರೂಪದಲ್ಲಿ ಅನುವಾದ ಮಾಡಿದ್ದಾರೆ. ಅನೇಕ ವಿದ್ವಾಂಸರು ಓದಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಇದು ಒಂದು ಉತ್ತಮ ಕಾವ್ಯಕೃತಿ ಎಂದು ಹೇಳ ಬಹುದು ಸಂಸ್ಕೃತ ಬಾರದ ಜನರು ಸರಳವಾದ ಶೈಲಿಯಲ್ಲಿ ಅನು ವಾದ ಮಾಡಿದ ಈ ಪುಸ್ತಕವನ್ನು ಓದಿ ದೈವಿಕ ಆನಂದವನ್ನು ಪಡೆಯಲಿ.

Sri Vidyabharathi Book Centre, Sringeri